# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:243 • ನೋಂದಣಿ ನಂ.:KARKAN27911 • ವಿಜಯನಗರ • 21.02.2024 • ಬುಧವಾರ • ಪುಟ:04 • ಬೆಲೆ:2

Volume:01 • Issue:243 • Reg.No:KARKAN27911 • VIJAYANAGARA • 21.02.2024 • Wednesday • Page:04 • Rs:2



- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**21–02–2024 – ಬುಧವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಆಯುಷ್ಮಾನ್ |
| ಕರಣ | : ಬಾಳವ |
| ಕರಣ | : ಕೌಳವ |
| ಸೂರ್ಯೋದಯ | : 06.56.48 |
| ಸೂರ್ಯಾಸ್ತ | : 18:24:40 |
| ರಾಹು | : 14:41–14:07 |
| ಯಮಘಂಡ | : 08:23–09:49 |
| ಗುಳಿಕ | : 11:15–12:41 |

## ವಿಶೇಷ ಲೇಖನಗಳು

### ಪರೀಕ್ಷೆಗೆ ತಯಾರಾಗುವ ಬಗೆ



ಪುಟ 2ರಲ್ಲಿ
ಲೇಖಕರು:
**ವೀಣಾ ಹೇಮಂತಗೌಡ ಪಾಟೀಲ್**
ಮುಂಡರಗಿ, ಗದಗ

### ನೀಲಿ ನೆರಳಲ್ಲಿ ಭಾರತ! ನಿಸ್ಸಾರದತ್ತ ಬದುಕು!!



ಪುಟ 3 ರಲ್ಲಿ
ಲೇಖಕರು:
**ಜಿ ಶಿವಕುಮಾರ್ ಸೋಗಿ**
ಕಾರವಾರ, ಕೈಗಾ

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ: 20–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.70 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 506 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.217 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1609.21 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9987 ಕ್ಯುಸೆಕ್ |
| ಸಾಮರ್ಥ್ಯ | 36.043 ಟಿಎಂಸಿ |

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಮಠಗಳು ಸರ್ವ ಸಮಾನತೆಯ ಸಂಕೇತ

## ಪ್ರಾಂಶುಪಾಲ ನಿರ್ಮಲ ಶಿವನಗುತ್ತಿ ಹೇಳಿಕೆ। ನುಡಿಸಿರಿ ಸಾಹಿತ್ಯ ಕಾರ್ಯಕ್ರಮ। ಸರ್ವರಿಗೂ ವಸತಿ ಅನ್ನ, ಅಕ್ಷರದಾಸೋಹ

**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸಮಾಜದಲ್ಲಿ ಸರ್ವರನ್ನೂ ಸಮಾನವಾಗಿ ಕಾಣುವ ಮೂಲಕ ಸರ್ವರಲ್ಲೂ ಸಮಾನತೆ ಜಾಗೃತಿ ಮೂಡಿಸುವಲ್ಲಿ ಮಠಮಾನ್ಯಗಳ ಮಹತ್ವದ ಪಾತ್ರವಹಿಸಿವೆ ಎಂದು ಕೊಟ್ಟೂರು ಕಾಲೇಜ್ ಪ್ರಾಂಶುಪಾಲರಾದ ನಿರ್ಮಲ ಶಿವನಗುತ್ತಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ನಂದಿಪುರ ಪುಣ್ಯಕ್ಷೇತ್ರ ಶ್ರೀಗುರು ದೊಡ್ಡಬಸವೇಶ್ವರ ಸ್ವಾಮಿಯ 40ನೇ ವರ್ಷದ ರಥೋತ್ಸವ ನಿಮಿತ್ತ ಡಾ.ಮಹೇಶ್ವರ ಸ್ವಾಮೀಜಿಗಳ ನೇತೃತ್ವದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ನುಡಿಸಿರಿ ಸಾಹಿತ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ಮಹಿಳೆಯರಿಗೆ ಪ್ರಾಧ್ಯಾನ್ಯತೆ ನೀಡುವಂತ ದೇಶ ನಮ್ಮದು, ಭಾರತದಲ್ಲಿ ಮಹಿಳೆಯರಿಗೆ ಪ್ರಾಮುಖ್ಯತೆ ನೀಡುವಷ್ಟು ಬೇರೆ ರಾಷ್ಟ್ರಗಳಲ್ಲಿ ನೀಡುತ್ತಿಲ್ಲ. ಇದಲ್ಲದೆ, ಬಸವಣ್ಣನವರ ಕಾಲದಿಂದಲೂ ಮಹಿಳೆಯರಿಗೆ ಪ್ರಾಮುಖ್ಯತೆ ನೀಡುತ್ತಲೇ ಬಂದಿತ್ತು. ಈಗ ಇದನ್ನು ಮೀರಿ ಮಹಿಳೆಯರು ಸಮಾನತೆಯ ಜೊತೆಗೆ ಸ್ವಾವಲಂಬಿ ಬದುಕು ಕಂಡುಕೊಳ್ಳಲು ಸಮಾಜ



ಅವಕಾಶ ಕಲ್ಪಿಸಿಕೊಟ್ಟಿದೆ ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಾಲಯ್ಯ ಶಾಸ್ತ್ರಿಗಳು ಅಧ್ಯಕ್ಷತೆವಹಿಸಿ ಮಾತನಾಡಿ, ಹಬ್ಬ ಹರಿದಿನಗಳು ಬರುವುದು ಹೊಟ್ಟೆ ತುಂಬಿಸಲು, ನುಡಿಹಬ್ಬ ನೆತ್ತಿಯ ಜ್ಞಾನ ತುಂಬಿಸುವ ಕಾರ್ಯಕ್ರಮವಾಗಿದೆ. ಇಂತಹ ಕಾರ್ಯಕ್ರಮಗಳು ನಡೆದಾಗಲೇ ಕನ್ನಡದ ಮಹತ್ವ, ಭಾಷೆಗೆ ಗೌರವ ಹೆಚ್ಚಲು ಸಾಧ್ಯ ಎಂದರು. ಮಠಗಳು ಸಹ ಶಿಕ್ಷಣದಲ್ಲೂ, ಸಮಾಜ ಸೇವೆಯಲ್ಲೂ ಮುಂದಿವೆ. ಇದರ ಉಪಯೋಗವನ್ನು ಪ್ರತಿಯೊಬ್ಬರು ಪಡೆಯಬೇಕು ಎಂದರು.

ಇದೇ ವೇದಿಕೆಯಲ್ಲಿ ಶಾಲಾ ಮಕ್ಕಳಿಂದ ನೃತ್ಯ ಸಂಯೋಜನೆಯ ಪ್ರದರ್ಶಿಸಲಾಯಿತು. ಬಳಿಕ ಸಾಹಿತ್ಯಾಸಕ್ತರಿಂದ ಸ್ವರಚಿತ ಕವಿಗೋಷ್ಠಿ ಕೂಡ ನಡೆಯಿತು. ಕೊಪ್ಪಳದ ಕಲಾವಿದರು ಚೌಟ್ಗಿ ಪದಗಳನ್ನಾಡಿದರು. ವಿಶೇಷ ಸಾಧಕರಾದ ತಾಲೂಕು ವೈದ್ಯಾಧಿಕಾರಿ ಡಾ.ಶಿವರಾಜ್, ಕೋಗಳಿಯ ಡಾ.ಅರುಣಾಗಂಗಾ (ಆರೋಗ್ಯಇಲಾಖೆ), ರೇಖಾ ಅಕ್ಕಿ(ಕ್ರೀಡೆ), ಶಿಕ್ಷಕ ಪರಮೇಶ್ವರ ಸೊಪ್ಪಿಮಠ(ಸಾಹಿತ್ಯ), ನಾಗಭೂಷಣ ಗದ್ದಿಕೆರೆ, ಅಂಬಳಿ ಕೇಶವಮೂರ್ತಿ(ಸಮಾಜ ಸೇವೆ), ಎಲ್.ರೆಡ್ಡಿನಾಯ್ಕ್(ಶಿಕ್ಷಣ), ಸಿ.ಗೌತಮ್(ಸಂಘಟನೆ), ಜಗದೀಶ(ಸ್ವಚ್ಛತೆ), ಹಂಚಿನಮನಿ ರಮೇಶ(ರಂಗಭೂಮಿ) ರವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಜಾತ್ರಾಮಹೋತ್ಸವದಲ್ಲಿ ಕೃಷಿಮೇಳ, ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ, ಧರ್ಮಸಭೆ, ಸಾವಯವ ಕೃಷಿ ಸಂವಾದಗಳು ನಡೆದವು.

ತಾವರೆಕೆರೆಯ ಶಿಲಾಮಠದ ಡಾ.ಸಿದ್ದಲಿಂಗ ಶಿವಚಾರ್ಯ, ಬಿಳಿಕಿ ಹಿರೇಮಠದ ರಾಚೋಟೇಶ್ವರ ಸ್ವಾಮೀಜಿ, ಗದ್ದಿಕರೆಯ ಚರಂತೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹಿರಿಯ ಸಾಹಿತಿ ಹಿ.ಮ. ಕೊಟ್ರಯ್ಯ, ಸುಧಾಚಿದಾನಂದ, ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ರವಿನಾಯ್ಕ್, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಹ್ಯಾಟಿ ಲೋಕಪ್ಪ ಸೇರಿದಂತೆ ಅನೇಕರು ಇದ್ದರು.

ಶಾರದ ಮಂಜುನಾಥ ಸಂಗಡಿಗರು ಪ್ರಾರ್ಥಿಸಿದರು. ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ.ಪಿ.ಎಂ. ಮಂಜುನಾಥ, ಕಾರ್ಯದರ್ಶಿ ಬಿ.ಕೊಟ್ರಪ್ಪ, ಉಪನ್ಯಾಸಕ ಗುರುಬಸವರಾಜ್ ನಿರ್ವಹಿಸಿದರು.

# ಮಾನವ ಕುಲ ರಕ್ಷಣೆಗೆ ವಿಷಮುಕ್ತ ಬೆಳೆ ಬೆಳೆಯಿರಿ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ರಾಸಾಯನಿಕ ಮುಕ್ತ ಬೆಳೆಗಳನ್ನ ರೈತ ಬೆಳೆಯುವ ಮೂಲಕ ಮಾನವ ಕುಲವನ್ನ ಉಳಿಸುವ ಕೆಲಸವಾಗಬೇಕು ಎಂದು ಉಪನ್ಯಾಸಕ ನಾಗರಾಜ ಕೊಟ್ರಪ್ಪನವರ್ ಹೇಳಿದರು.

ಪಟ್ಟಣದ ಹೊರವಲಯದ ಆದರ್ಶ ಶಾಲೆಯಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಘಟಕ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರದಲ್ಲಿ ಕೃಷಿ ಕ್ಷೇತ್ರದಲ್ಲಿನ ಬದಲಾವಣೆಗಳು ಕುರಿತು ಉಪನ್ಯಾಸ ನೀಡಿ ಮಾತನಾಡಿದರು. ಆದಿಮಾನವರ ಕಾಲದಲ್ಲಿ ಗೆಡ್ಡೆ, ಗೆಣಸುಗಳನ್ನ ತಿಂದು ಬದುಕುತ್ತಿದ್ದ ಮಾನವ, ದಿನಕಳೆದಂತೆ ಬಿತ್ತಿ ಬೆಳೆಯುವದನ್ನ ಕಲಿತು, ಕಾಲಕ್ರಮೇಣ ಅದನ್ನ ವ್ಯವಹಾರಿಕ ಮನೋಭಾವನೆ ಬೆಳಸಿಕೊಂಡು ಅಧಿಕ ಇಳುವರಿಯ ಮೋಸಕ್ಕೆ ಬಲಿಯಾಗಿ ರಾಸಾಯನಿಕ ಸಿಂಪರಣೆ ಹಾಗೂ ರಸಗೊಬ್ಬರ ಹಾಕಿ ಭೂಮಿಯನ್ನ ವಿಷಮಾಡಿ ತಾನೂಕೂಡ ನಾನಾ ರೋಗಗಳಿಗೆ ಬಲಿಯಾಗಿವ ಹಂತಕ್ಕೆ ಬಂದಿದ್ದಾನೆ. ಆದ್ದರಿಂದ ರೈತರು ಸಾವಯವ ಪದ್ದತಿ ಅಳವಡಿಸಿಕೊಂಡು ವಿಷಮುಕ್ತ ಬೆಳೆಗೆ ಆದ್ಯತೆ ನೀಡಿ ಮಾನವ ಕುಲವನ್ನು ರಕ್ಷಿಸಬೇಕು ಎಂದು ತಿಳಿಸಿದರು.

ಸಮಾಜ ಬದಲಾವಣೆಯಲ್ಲಿ ಶಿಕ್ಷಕರ ಪಾತ್ರ ಕುರಿತು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ.ಬಿ.ಶಿವಾನಂದ ಮಾತನಾಡಿ, ಶಿಕ್ಷಕನಾದವನಿಗೆ ಬುದ್ದನ ತಾಳ್ಮೆ, ಗಾಂಧಿಯ ಹೋರಾಟ, ಅಂಬೇಡ್ಕರ್ ಜಾಣ್ಮೆಯನ್ನು ಹೊಂದಿರಬೇಕು. ಶಿಕ್ಷಕನಾದವನಿಗೆ ದೂರದೃಷ್ಟಿ ಇರಬೇಕು, ಶಿಕ್ಷಕ ಸಮಾಜದ ಒಳಿತನ್ನು ಮನಗಂಡು ವಿಧ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣವನ್ನು ಧಾರೆಎರೆಯಬೇಕು. ಇಲ್ಲವಾದಲ್ಲಿ ಅಧರ್ಮವು ತಲೆಎತ್ತಿ ಸಮಾಜದಲ್ಲಿ ಅನಾಚಾರಗಳು ವಿಜೃಂಭಿಸಲು ಆರಂಭವಾಗುತ್ತದೆ.

ಆ ನಿಟ್ಟಿನಲ್ಲಿ ಶಿಕ್ಷಕನ ಜವಾಬ್ದಾರಿ ಸಮಾಜದಲ್ಲಿ ದೊಡ್ಡ ಮಟ್ಟದಲ್ಲಿ ಇದೆ. ಸುಂದರ ಸಮಾಜಕ್ಕೆ ಶಿಕ್ಷಕರು ಅವಿರತವಾಗಿ ಶ್ರಮಿಸಬೇಕು ಎಂದು ಮಹಾಭಾರತ ಹಾಗೂ ರಾಮಾಯಣದ ದೃಷ್ಟಾಂತದ ಮೂಲಕ ಧರ್ಮ, ಅಧರ್ಮದ ಬಗ್ಗೆ ವಿಸ್ತೃತವಾಗಿ ತಿಳಿಸಿದರು. ಇದೇ ಸಂಧರ್ಭದಲ್ಲಿ ಶ್ರೀಮತಿ ಚಿಕ್ಕೋಬನಹಳ್ಳಿ ಶಂಕ್ರಮ್ಮ ಹಾಗೂ ಶ್ರೀಮತಿ ರುದ್ರಮ್ಮ ವಾಮದೇವ ಶಿವಾಚಾರ್ಯ ದತ್ತಿ ದಾನಿ ಕೆ.ಎಚ್.ಎಂ.ವೀರಭದ್ರಯ್ಯ ಇವರಿಗೆ ಸನ್ಮಾನ ಮಾಡಲಾಯಿತು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ಆದರ್ಶ ವಿದ್ಯಾಲಯದ ಎಸ್ಡಿಎಂಸಿ ಅಧ್ಯಕ್ಷ ಅಂಗಡಿ ಗಣೇಶ, ಮುಖ್ಯ ಶಿಕ್ಷಕ ಎಚ್.ಲಕ್ಷ್ಮಣ ಸಿಂಗ್, ಕನ್ನಡ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಕೆ.ಎಂ.ವೀರೇಶ್, ಗಾಂಧಿ ಸ್ಮಾರಕ ಸಮಿತಿ ಅಧ್ಯಕ್ಷ ಡಿ.ನಾಗರಾಜ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ ಸೇರಿದಂತೆ ಶಿಕ್ಷಕರು,ವಿಧ್ಯಾರ್ಥಿಗಳು ಇದ್ದರು.

# ಸವಿತಾ ಮಹರ್ಷಿ ಜಯಂತಿ ಸಮಾರಂಭ ಅದ್ದೂರಿ ಆಚರಣೆ



**■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಸವಿತಾ ಮಹರ್ಷಿ ಜಯಂತಿ ಸಮಾರಂಭವು ಪಟ್ಟಣದ ಸವಿತಾ ಭವನದಲ್ಲಿ ಸವಿತಾ ಸಮಾಜದಿಂದ ಮಂಗಳವಾರ ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಸವಿತಾ ಮಹರ್ಷಿ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಅಲಂಕಾರಗೊಳಿಸಲಾಗಿತ್ತು. ಸವಿತಾ ಸಮಾಜದವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸವಿತಾ ಸಮಾಜದ ಹಿರಿಯ ಬಯಲಾಟದ ಕಲಾವಿದ ಹಾಗೂ ಕಲಾನಿಧಿ ಪ್ರಶಸ್ತಿ ಪುರಸ್ಕೃತ ಗೊಲ್ಲರಹಳ್ಳಿ ನಾರಾಯಣಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ಸಮಾಜ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪುರಸ್ಕರಿಸಲಾಯಿತು.

ಸವಿತಾ ಸಮಾಜದ ಅಧ್ಯಕ್ಷ ಸಿ.ಕೆ. ರಾಮುಡು, ಉಪಾಧ್ಯಕ್ಷ ಪಿ.ಎಲ್. ರಾಘವೇಂದ್ರ, ಖಜಾಂಚಿ ಕೆ. ವಿನೋದ, ಕಾರ್ಯಕಾರಿ ಸಮಿತಿ ಸದಸ್ಯರಾದ ಪಿ, ಗೋವಿಂದ, ನಾಗರಾಜ ಕಂಪ್ಲಿ, ಪಿ. ಶ್ರೀನಿವಾಸ, ಸವಿತಾ ಸಮಾಜದ ಸ್ಥಳೀಯ ಮುಖಂಡರಾದ ಕೆ. ತಮ್ಮಣ್ಣ, ಕೆ. ಸೋಮಶೇಖರ್, ಎಂ. ವೀರೇಶ್, ಕೆ. ವೆಂಕಟೇಶ್, ಶ್ರೀಧರ, ಪಿ. ಶಂಕರ್, ಗಿರಿವಾಸು, ಮೌನೇಶ್, ಎಂ. ನರೇಶ್, ಟಿ. ಕೆ. ಚಂದ್ರಶೇಖರ್, ಟಿ.ಕೆ. ಮಹೇಶ್ ಕುಮಾರ್, ನಲ್ಲಾರೆಡ್ಡಿ, ಯೋಗೇಶ್, ರಂಗ, ಬಸವ ಸೇರಿದಂತೆ ಸಮಾಜದ ಯುವಕರು, ಮಹಿಳೆಯರು ಸಮಾರಂಭದಲ್ಲಿ ಭಾಗವಹಿಸಿದ್ದರು. ಸಮಾರಂಭದ ನಂತರ ಸಮಾಜದಿಂದ ಅನ್ನಸಂತರ್ಪಣಾ ಕಾರ್ಯಕ್ರಮ ನಡೆಯಿತು.


ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಮೊ: 9448633038





Grow Your Business
With Us
S.M.Traders & Services
Atlas Copco
9686663125 - 9686663132 - 9686413132

## ವಚನ ಅರಿವು

### ಆಚರಣೆ

**ಪರಮವಿಭೂತಿಯ ಹಣೆಯಲ್ಲಿ ಧರಿಸಿ,**
**ಕೊರಳಲ್ಲಿ ರುದ್ರಾಕ್ಷಿಯ ಧರಿಸಿ,**
**ಗುರು ಕೊಟ್ಟ ಲಿಂಗವ ಕರದಲ್ಲಿ ಧರಿಸಿ,**
**ಮರಳಿ ಮತ್ತೆ ಧರೆಯ ಪ್ರತಿಷ್ಠೆಗೆರಗುವ**
**ನರಕಜೀವಿಗಳನೇನೆಂಬೆನಯ್ಯಾ ಕಲಿದೇವಯ್ಯ.**
**– ಮಡಿವಾಳ ಮಾಚಯ್ಯ**

ಶರಣತತ್ವವನ್ನು ಒಪ್ಪಿ ಭಕ್ತನಾಗಿ ಗುರುವಿನಿಂದ ಲಿಂಗ ಪಡೆದು ಶರಣರ ಜೀವನ ಮಾರ್ಗವನ್ನು ಹಿಡಿದು ಬದುಕಬೇಕು. ಶರಣರ ವಿಚಾರಗಳಲ್ಲಿ ನಿಷ್ಠೆಯುಳ್ಳವರಾಗಿರಬೇಕು. ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಲಿಂಗ ಧರಿಸುವುದು ಕೇವಲ ಧಾರ್ಮಿಕ ಆಚರಣೆಯಷ್ಟೆ ಅಲ್ಲ. ಅವು ಜೀವನದಲ್ಲಿ ಅನುಸರಿಸಬೇಕಾದ ಮಾರ್ಗಗಳ ಕುರುವುಗಳಾಗಿ ಶರಣರಲ್ಲಿ ಮೂಡಿವೆ. ಧರಿಸಿ ಆಚಾರವಂತರಾಗಬೇಕು. ಇವುಗಳನ್ನು ಧರಿಸಿಯೂ ಆಚಾರವಂತರಾಗದೆ ಕೇವಲ ತೋರ್ಗಾಣಿಕೆಗೆ ಬಳಸಿದರೆ ಅವರು ಆಚಾರವಂತರಲ್ಲ. ಜೊತೆಗೆ ಪ್ರತಿಷ್ಠೆಗಾಗಿ ಹುಟ್ಟಿರುವಂತ ದೈವಗಳಿಗೆ ಅಥವಾ ಹಿತಾಸಕ್ತಿಗಾಗಿ ಪ್ರತಿಷ್ಠಾಪಿಸಲಾಗಿರುವ ದೈವಗಳಿಗೆ ನಡೆದುಕೊಂಡರೆ ಅವರನ್ನು ನರಕದಲ್ಲಿ ವಾಸಿಸುವವರು ಎನ್ನುತ್ತಾನೆ ಶರಣ ಮಾಚಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಫೆ.21 ರಿಂದ ವಾರ್ತಾ ಇಲಾಖೆಯಿಂದ ಬೀದಿನಾಟಕ ಕಾರ್ಯಕ್ರಮಗಳ ಪ್ರದರ್ಶನ

**ಹಂಪಿ ಟೈಮ್ಸ್ ಕೊಪ್ಪಳ**
ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತಂತೆ ಪ್ರಚಾರ ಕೈಗೊಳ್ಳಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2023-24ನೇ ಸಾಲಿನಲ್ಲಿ ಶ್ರೀ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘ (ರಿ) ಅಳವಂಡಿ ಕಲಾತಂಡದ ಮೂಲಕ ಫೆ.21ರಿಂದ ಫೆ.23 ರವರೆಗೆ ಯಲಬುರ್ಗಾ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಜನಪದ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ.

ಫೆ.21 ರಂದು ಬೆಳಿಗ್ಗೆ ಶಿರಗುಂಪಿ ಹಾಗೂ ಸಂಜೆ ಹಿರೇಮ್ಯಾಗೇರಿಯಲ್ಲಿ, ಫೆ.22 ರಂದು ಬೆಳಿಗ್ಗೆ ನಿಟ್ಟಾಲಿ ಹಾಗೂ ಸಂಜೆ ಮಸಬಹಂಚಿನಾಳ ಫೆ.23 ರಂದು ಬೆಳಿಗ್ಗೆ ನಿಲೋಗಲ್ ಹಾಗೂ ಸಂಜೆ ಹಿರೇವಂಕಲಕುಂಟಾ ಗ್ರಾಮಗಳಲ್ಲಿ ಬೀದಿನಾಟಕ ಕಾರ್ಯಕ್ರಮಗಳು ಜರುಗಲಿದೆ.

ಕಲಾವಿದರು ಆಯಾ ಗ್ರಾಮದ ಜನ ಸಂದಣಿ ಸ್ಥಳದಲ್ಲಿ ಸರ್ಕಾರದ ಬೀದಿನಾಟಕ ಕಾರ್ಯಕ್ರಮಗಳ ಬಗ್ಗೆ ಪ್ರಚುರಪಡಿಸುವರು. ಆಯಾ ಗ್ರಾಮಸ್ಥರು ಬೀದಿನಾಟಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಜಿಲ್ಲಾ ವಾರ್ತಾಧಿಕಾರಿಗಳಾದ ಗವಿಸಿದ್ದಪ್ಪ ಹೊಸಮನಿ ತಿಳಿಸಿದ್ದಾರೆ.




## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 9448633038

# ಪರೀಕ್ಷೆಗೆ ತಯಾರಾಗುವ ಬಗೆ



ನಮ್ಮ ಭಾರತೀಯ ಸಂಪ್ರದಾಯದಲ್ಲಿ ಹಬ್ಬಗಳು ಬಲು ಪ್ರಾಮುಖ್ಯತೆಯನ್ನು ಹೊಂದಿವೆ. ಹಬ್ಬಕ್ಕೆ ಹಲವಾರು ದಿನಗಳ ಮೊದಲು ಮನೆಯ ಮೂಲೆಗಳಲ್ಲಿ ಕಟ್ಟಿರುವ ಜೇಡರ ಬಲೆಗಳನ್ನು ತೆಗೆದು, ಧೂಳು ಜಾಡಿಸಿ,ಕಿಟಕಿ ಬಾಗಿಲುಗಳಿಗೆ ಹಾಕಿರುವ ಪರದೆಗಳನ್ನು ತೊಳೆದು ಒಣಗಿಸಿ ಮತ್ತೆ ನೇತು ಹಾಕಿ, ಇಡಿ ಮನೆಯ ಕಸಗುಡಿಸಿ ಒರೆಸಿ ಅಡುಗೆ ಮನೆಯಲ್ಲಿರುವ ಎಲ್ಲ ಡಬ್ಬಗಳನ್ನು ತೊಳೆದು ಒರೆಸಿ ಸ್ವಸ್ಥಾನಕ್ಕೆ ಸೇರಿಸುತ್ತೇವೆ. ನಂತರ ಹಬ್ಬಕ್ಕೆ ಬೇಕಾಗುವ ಸಿಹಿ ಮತ್ತು ಖಾರದ ತಿಂಡಿಗಳನ್ನು ತಯಾರು ಮಾಡಿಕೊಳ್ಳುತ್ತೇವೆ. ಪೂಜೆಗೆ ಬೇಕಾಗುವ ಪರಿಕರಗಳನ್ನು ಹಿಂದಿನ ದಿನವೇ ಸಜ್ಜಾಗಿಟ್ಟುಕೊಳ್ಳುವ ನಾವು ಹಬ್ಬದ ದಿನ ಮುಂಜಾನೆ ಮತ್ತೊಮ್ಮೆ ಇಡೀ ಮನೆಯನ್ನು ಕಸ ಗುಡಿಸಿ ಒರೆಸಿ ತಳಿರು ತೋರಣಗಳಿಂದ ಶೃಂಗರಿಸಿ ಪೂಜೆಗೆ ಎಲ್ಲಾ ಸಿದ್ಧತೆಗಳನ್ನು ಮಾಡಿ ಸಾಂಪ್ರದಾಯಿಕವಾಗಿ ಮನೆ ಮಂದಿ ಎಲ್ಲಾ ಸೇರಿ ಪೂಜೆಯನ್ನು ನೆರವೇರಿಸುತ್ತೇವೆ. ಹಬ್ಬದ ಅಡುಗೆಯನ್ನು ತಯಾರಿಸಿ ದೇವರಿಗೆ ನೈವೇದ್ಯವನ್ನು ಮಾಡಿ ಮನೆ ಮಂದಿಯಲ್ಲ ಒಟ್ಟಾಗಿ ಕುಳಿತು ಹರಟೆ ಹೊಡೆಯುತ್ತಾ ಊಟ ಮಾಡಿ ಸಂಭ್ರಮಿಸುತ್ತೇವೆ. ಹೀಗೆ ಬೇಸರವಿಲ್ಲದೆ ವರ್ಷಕ್ಕೆ ಹಲವಾರು ಹಬ್ಬಗಳನ್ನು ನಾವು ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸುತ್ತೇವೆ. ಈ ಹಬ್ಬಗಳು ನಮ್ಮ ಮೈಮನಗಳ ಜಡತೆಯನ್ನು ಕಳೆದು ನಮ್ಮಲ್ಲಿ ಹೊಸ ಉತ್ಸಾಹವನ್ನು ತುಂಬಿಸುತ್ತವೆ.

**ಅಂತೆಯೇ ಪರೀಕ್ಷೆ ಎಂಬ ಹಬ್ಬವು ಕೂಡ... ಹೌದು ಪರೀಕ್ಷೆ ಕೂಡ ಒಂದು ಹಬ್ಬವೇ!!**

ಮನದ ಮೂಲೆಯಲ್ಲಿ ಕಟ್ಟಿಕೊಂಡಿರುವ ಜಡತ್ವ ಎಂಬ ಜೇಡರ ಬಲೆಯನ್ನು ತೆಗೆದು, ಅಶ್ರದ್ಧೆಯ ಕಸ ಗುಡಿಸಿ, ಸ್ವಚ್ಛ ಶುದ್ಧವಾದ ಮನಸ್ಥಿತಿಯಲ್ಲಿ ಅಭ್ಯಾಸ ಮಾಡುತ್ತಾ ಜ್ಞಾನದ ತಳಿರು ತೋರಣಗಳನ್ನು ಕಟ್ಟುತ್ತಾ, ಓದು ಬರಹಗಳ ಸಿಹಿ ಖಾರದ ತಿಂಡಿಗಳನ್ನು ತಯಾರಿಸಿ ಮನಕ್ಕೆ ಉಣಬಡಿಸಿ, ಕಲಿತ ವಿದ್ಯೆಯ ಪ್ರದರ್ಶನಕ್ಕೆ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಪರೀಕ್ಷೆಯೆಂಬ ಹಬ್ಬದ ಮುಂಚೆ ರಿವಿಶನ್ ಎಂಬ ಪುನರಾವರ್ತಿತ ಓದು ಬರಹಗಳಲ್ಲಿ ತೊಡಗಿಕೊಳ್ಳಬೇಕು. ಪರೀಕ್ಷೆಗೆ ಬೇಕಾಗುವ ಅವಶ್ಯಕ ವಸ್ತುಗಳನ್ನು ಹಿಂದಿನ ದಿನವೇ ಎತ್ತಿಟ್ಟುಕೊಳ್ಳಬೇಕು. ನಿಗದಿತ ಸಮಯಕ್ಕೆ ಪರೀಕ್ಷಾ ಕೇಂದ್ರಕ್ಕೆ ಹೋಗಿ ಪರೀಕ್ಷೆಗೆ ಬರೆಯುವ ಮೂಲಕ ಪರೀಕ್ಷೆಯ ಹಬ್ಬವನ್ನು ಅದ್ದೂರಿಯಾಗಿ ಆಚರಿಸಬೇಕು. ಅಂದಾಗ ಮಾತ್ರ ಜೀವನದಲ್ಲಿ ಯಶಸ್ವಿ ಫಲಿತಾಂಶದ ಸಮೃದ್ಧಿಯನ್ನು ಕಾಣಬಹುದು. ಹೀಗೆ ಮಾಡುವುದರಿಂದ ಪ್ರತಿ ಪರೀಕ್ಷೆಯ ಹಬ್ಬಗಳು ನೆನಪಿನ ಚಾದರದ ಪದರಗಳಲ್ಲಿ ಉಳಿದು ಮುಂದಿನ ಜೀವನದಲ್ಲಿ ಸುಖಾನುಭವ ಕೊಡಬಲ್ಲವು.

**ಒಂದು ಕಥೆಯ ಮೂಲಕ ಪರೀಕ್ಷೆಗೆ ಹೇಗೆ ತಯಾರಾಗಬೇಕು ಎಂಬುದನ್ನು ಅರಿತುಕೊಳ್ಳೋಣ.**

ಕಾಶಿ ರಾಜ್ಯವನ್ನಾಳುತ್ತಿದ್ದ ರಾಜನಿಗೆ ಮಕ್ಕಳಿಲ್ಲದ್ದರಿಂದ ಆತನ ಉತ್ತರಾಧಿಕಾರಿಯನ್ನು ಆರಿಸುವ ಸಂದಿಗ್ಧ ಪರಿಸ್ಥಿತಿ ಆತನ ಮಂತ್ರಿಮಂಡಲಕ್ಕೆ ಒದಗಿತ್ತು. ರಾಜ್ಯದೆಲ್ಲೆಡೆ ಡಂಗುರ ಸಾರಿ ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆಯನ್ನು ಘೋಷಿಸಿದರು. ಕಾಶಿ ರಾಜ್ಯವನ್ನು ಆಳಲು ಸಮರ್ಥ ಉತ್ತರಾಧಿಕಾರಿಯಾಗಿ ಆಯ್ಕೆಯಾಗಲು ಕೆಲ ಮಾನದಂಡಗಳನ್ನು ರೂಪಿಸಿ . ಆ ಮಾನದಂಡಗಳ ಪ್ರಕಾರ ಸಕಲ ವಿದ್ಯಾ ಪಾರಂಗತನಾದ ಸಾಹಸಿ ಯುವಕ ಕೇವಲ ಎರಡು ವರ್ಷ ಮಾತ್ರ ರಾಜ್ಯವನ್ನು ಆಳಲು ಅವಕಾಶವನ್ನು ಪಡೆಯುತ್ತಾನೆ, ನಂತರ ಆತನನ್ನು ನದಿಯಾಚೆಗಿನ ಕಾಡಿನಲ್ಲಿ ಬಿಟ್ಟು ಬರಲಾಗುವುದು ಎಂಬ ಶರತ್ತೊಂದನ್ನು ಹಾಕಿದ್ದರು. ಅತ್ಯಂತ ಕ್ರೂರ ಮೃಗಗಳ ವಾಸಸ್ಥಾನವಾಗಿದ್ದ ನದಿಯಾಚೆಗಿನ ಆ ಕಾಡಿನ ವಾಸದ ವಿಷಯ ಕೇಳಿಯೇ ಸಾಕಷ್ಟು ಜನ ಯುವಕರು ರಾಜನಾಗುವ ಆಸೆಯನ್ನು ಕೈಬಿಟ್ಟರು. ಆದರೆ ಓರ್ವ ಸ್ಫುರದ್ರೂಪಿ ಯುವಕ ಮಾತ್ರ ತಾನು ಎಲ್ಲದಕ್ಕೂ ಸಿದ್ಧನಾಗಿರುವೆ ಎಂದು ಮುಂದೆ ಬಂದನು. ಆತನ ಧೈರ್ಯ, ಸಾಹಸ, ಪರಾಕ್ರಮ ಮತ್ತು ವಿದ್ಯಾ ಪಾರಂಗತತೆಯನ್ನು ಒರೆಗೆ ಹಚ್ಚಿ ಆತನ ಆಯ್ಕೆಗೆ ಹಸಿರು ನಿಶಾನೆ ತೋರಿದ ಮಂತ್ರಿ ಮಾಗಧರು ಆತನಿಗೆ "ನಮ್ಮ ಎಲ್ಲಾ ಷರತ್ತಿಗೆ ಒಪ್ಪಿಗೆ ಇದೆಯೇ?? ಎಂದು ಕೇಳಿದಾಗ ಮುಗುಳ್ನಗುತ್ತಾ ಆ ಯುವಕ ತನ್ನ ಒಪ್ಪಿಗೆಯನ್ನು ಸೂಚಿಸಿದನು. ಮುಂದೆ ಶುಭ ಮುಹೂರ್ತದಲ್ಲಿ ಪಟ್ಟಾಭಿಷಿಕ್ತ ರಾಜನಾದನು.


ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ಹೊಸ ರಾಜನ ಉತ್ಸಾಹೀ ಆಡಳಿತದಲ್ಲಿ ಹಲವಾರು ಬದಲಾವಣೆಗಳಾಗಿ ಕೆಲವೇ ತಿಂಗಳುಗಳಲ್ಲಿ ಕಾಶಿ ರಾಜ್ಯವು ಸಾಮಾಜಿಕವಾಗಿ, ಧಾರ್ಮಿಕವಾಗಿ ಒಳ್ಳೆಯ ಹೆಸರನ್ನು ಆರ್ಥಿಕವಾಗಿ ಸಬಲತೆಯನ್ನು ಗಳಿಸಿತು. ಕೆರೆಕಟ್ಟೆಗಳನ್ನು, ಬಾವಿ, ಬಾಂದಾರಗಳನ್ನು ನಿರ್ಮಿಸಿ ರೈತರಿಗೆ ನೀರಾವರಿ ಯೋಜನೆಗಳ ಅನುಕೂಲ ಮಾಡಿಕೊಟ್ಟ ಹೊಸ ರಾಜನು ಸೈನಿಕರಿಗೆ ವಿಶೇಷ ತರಬೇತಿಗಳನ್ನು ಏರ್ಪಡಿಸಿ ಸುಸಜ್ಜಿತ ಸೈನ್ಯವನ್ನು ಕೂಡ ಕಟ್ಟಿದನು. ಜೊತೆಗೆ ಒಳ್ಳೆಯ ಆರೋಗ್ಯ ಚಿಕಿತ್ಸೆ ದೊರೆಯುವಂತೆ ಯೋಜನೆ ರೂಪಿಸಿ ಜನರ ಪ್ರೀತಿಗೆ ಪಾತ್ರನಾದನು. ಆತನ ಕಾರ್ಯಭಾರವನ್ನು ನೋಡುತ್ತಿದ್ದ ವೃದ್ಧ ರಾಜ ಮತ್ತು ಆತನ ಮಂತ್ರಿ ವರ್ಗದವರು ಈತನೇ ಇನ್ನೂ ಹಲವಾರು ವರ್ಷ ನಮ್ಮ ರಾಜನಾಗಿ ಇರಬಾರದೇ ಎಂದು ಯೋಚಿಸುವಂತೆ ಆಗಿತ್ತು.

ಆದರೆ ನಿಯಮ ಪಾಲನೆ ಆಗಲೇಬೇಕಲ್ಲ, ಅಂತೆಯೇ ಎರಡು ವರ್ಷಗಳ ಅವಧಿ ಪೂರೈಸಿದ ನಂತರ ನದಿಯ ದಡದಲ್ಲಿ ಯುವ ರಾಜನನ್ನು ಸರ್ವ ಪ್ರಜಾವರ್ಗದ ಸಮ್ಮುಖದಲ್ಲಿ ಗೌರವ ಸನ್ಮಾನ ಮಾಡಿ ಬೀಳ್ಕೊಟ್ಟರು. ನದಿಯಾಚೆಗಿನ ಕಾಡಿಗೆ ಬಿಟ್ಟು ಬರಲು ನಾವೆಯಲ್ಲಿ ಯುವಕ ರಾಜನೊಂದಿಗೆ ವೃದ್ಧ ರಾಜ ಮತ್ತು ಮಂತ್ರಿಮಂಡಲದ ಹಲವಾರು ಜನ ಕುಳಿತುಕೊಂಡಿದ್ದರು. ಎಲ್ಲರೂ ದುಗುಡದಿಂದ ಕುಳಿತಿದ್ದರೆ ಯುವಕ ರಾಜನೊಬ್ಬನೇ ಮಂದಸ್ಮಿತನಾಗಿದ್ದನು. ಅಂತೆಯೇ ಮಂತ್ರಿಮಂಡಲದ ಹಿರಿಯ ಮಂತ್ರಿಯೊಬ್ಬರು ರಾಜರೇ, ನದಿಯಾಚೆಗಿನ ಕಾಡಿನಲ್ಲಿ ನಾವು ನಿಮ್ಮನ್ನು ಬಿಡಲು ಹೋಗುತ್ತಿದ್ದೇವೆ ಆದರೂ ನಿಮ್ಮ ಮುಖದಲ್ಲಿ ಲವಲೇಶ ಬೇಸರ,ದುಗುಡಗಳಿಲ್ಲ!! ಕಾರಣ ತಿಳಿಯಬಹುದೇ?? ಎಂದು ಕೇಳಿದಾಗ ರಾಜನು ಮತ್ತದೇ ಮುಗುಳ್ನಗೆ ಸೂಸುತ್ತಾ ನದಿಯಾಚೆ ಕಾಡು ಎಲ್ಲಿದೆ? ಎಂದು ಕೇಳಿದನು. ಅದು ಅತ್ತ..ಎಂದು ಮಂತ್ರಿ ಕೈ ಮಾಡಿ ತೋರಿಸಲು ಹೋದರೆ ಆಶ್ಚರ್ಯಅಲ್ಲೇನಿದೆ!!?? ಹಲವಾರು ಸುಂದರ ಮಹಲುಗಳನ್ನು ಹೊಂದಿರುವ,ದೇವಾಲಯಗಳ ಸಮುಚ್ಚಯ, ಉದ್ಯಾನವನ, ಆರೋಗ್ಯಧಾಮ,ಕೊಳಗಳನ್ನು ಹೊಂದಿರುವ ಸುಸಜ್ಜಿತವಾದ ನಗರ ಅಲ್ಲಿ ತಲೆಯೆತ್ತಿ ನಿಂತಿದೆ.ಆಶ್ಚರ್ಯ ಚಕಿತನಾದ ಮಂತ್ರಿಗೆ ರಾಜನು "ನಾನು ರಾಜನಾಗಿ ನಿಯುಕ್ತನಾದ ಕೂಡಲೇ ಮೊದಲು ಆ ಕಾಡಿಗೆ ಬೇಟೆಗಾರರನ್ನು ಕಳುಹಿಸಿ ಕಾಡು ಪ್ರಾಣಿಗಳನ್ನು ತೀರ ಒಳಗಿನ ಕಾಡಿನ ಓಡುವಂತೆ ಮಾಡಿಸಿದೆ. ನಂತರ ಕಾಡಿನ ಕೆಲ ಭಾಗವನ್ನು ಸ್ವಚ್ಛಗೊಳಿಸಿ ಅಲ್ಲಿ ಒಂದು ನಗರವನ್ನೇ ನಿರ್ಮಿಸಿದ್ದೇನೆ. ಸಾಕಷ್ಟು ಜನರು ಕೂಡ ಈಗ ಅಲ್ಲಿ ನೆಲೆಸಿದ್ದಾರೆ. ಒಂದು ಪುಟ್ಟ ರಾಜ್ಯವನ್ನು ಅಲ್ಲಿ ನಿರ್ಮಿಸಿರುವ ನಾನು ಈಗ ನದಿಯ ಆಚೆ ದಡಕ್ಕೆ ಹೋಗುತ್ತಲೇ ಅಲ್ಲಿ ನೆರೆದಿರುವ ಜನರ ಸಮ್ಮುಖದಲ್ಲಿ ನಾನು ರಾಜನಾಗಿ ಪಟ್ಟಕ್ಕೇರಿ ಅಲ್ಲಿ ರಾಜ್ಯಭಾರ ಮಾಡುವೆ ಎಂದು ಹೇಳಿದನು. ರಾಜನ ದೂರದೃಷ್ಟಿ ಮತ್ತು ಚಾಣಾಕ್ಷ ನಿರ್ಧಾರಗಳಿಂದ ಸಂತಸಪಟ್ಟ ವೃದ್ಧ ರಾಜ ಮತ್ತು ಮಂತ್ರಿಗಳು ಅತ್ಯಂತ ಖುಷಿಯಿಂದ "ಹಾಗಾದರೆ ಆ ರಾಜ್ಯದ ಜೊತೆಗೆ ನಮ್ಮ ರಾಜ್ಯದಲ್ಲಿಯೂ ಕೂಡ ನೀವೇ ರಾಜನಾಗಿ ಮುಂದುವರೆಯಿರಿ" ಎಂದು ಒಕ್ಕೊರಲಿನಿಂದ ಕೇಳಿಕೊಂಡರು.ಇದಕ್ಕೆ ಒಪ್ಪಿದ ಯುವ ರಾಜ ಮುಂದೆ ಹಲವಾರು ವರ್ಷಗಳ ಕಾಲ ಎರಡೂ ರಾಜ್ಯಗಳನ್ನು ಉತ್ತಮವಾಗಿ ಅಭಿವೃದ್ಧಿ ಪಡಿಸುತ್ತಾ ಒಳ್ಳೆಯ ರಾಜನೆಂದು ಹೆಸರು, ಕೀರ್ತಿಗಳಿಸಿದನು.

ಈ ಕಥೆಯಲ್ಲಿ ಬರುವ ಕಾಡು ನಮ್ಮ ವಿದ್ಯಾರ್ಥಿ ಜೀವನವಿದ್ದಂತೆ. ಆ ಕಾಡಿನಲ್ಲಿ ಬರುವ ಕ್ರೂರ ಮೃಗಗಳು ನಮ್ಮ ವಿದ್ಯಾರ್ಥಿ ಜೀವನಕ್ಕೆ ತೊಡಕಾಗುವ ಆಲಸಿತನ, ಅಶ್ರದ್ಧೆ, ಅನಿಯಮಿತತೆ ಮತ್ತು ಸಮಯ ಪ್ರಜ್ಞೆ ಇಲ್ಲದಿರುವುದು. ಇತ್ತೀಚಿಗಿನ ದಿನಗಳಲ್ಲಿ ನಮ್ಮ ಸಮಯವನ್ನು ಕೊಂದು ಹಾಕುತ್ತಿರುವ ಮಾಧ್ಯಮಗಳು,ಸಾಮಾಜಿಕ ಜಾಲತಾಣಗಳು ಮತ್ತು ಮೊಬೈಲ್ ಎಂಬ ಕ್ರೂರ ಮೃಗಗಳೊಂದಿಗೆ ನಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು. ಯಾವ ರೀತಿ ಮನೆಯ ಮೂಲೆ ಮೂಲೆಯನ್ನು ಸ್ವಚ್ಛಗೊಳಿಸುತ್ತೇವೆಯೋ ಹಾಗೆಯೇ ಮನದ ಮೂಲೆಯಲ್ಲಿರುವ ಭಯ, ಹಿಂಜರಿಕೆ , ಅರಿವಿನ ಕೊರತೆಗಳನ್ನು ಗುಡಿಸಿ ಹೊರ ಹಾಕಬೇಕು. ಸ್ವಚ್ಛವಾದ ಮನಸ್ಥಿತಿಯಲ್ಲಿ ಶಾಲೆಯ ಪಾಠ ಪ್ರವಚನಗಳನ್ನು ಆಲಿಸಬೇಕು. ಶಾಂತ ಮತ್ತು ಏಕಾಂತ ಪರಿಸರದಲ್ಲಿ ಓದಲು ಕುಳಿತರೆ ಜ್ಞಾನದ ಮಹಲಿನ ಒಂದೊಂದೇ ಹಂತಗಳನ್ನು ಕಟ್ಟುತ್ತಾ ಹೋಗಬಹುದು. ಸ್ವಲ್ಪವೇ ಏರುಪೇರಾದರೂ ಮಹಲು ಕುಸಿಯುವ ಸಾಧ್ಯತೆ ಇರುವುದರಿಂದ ಶ್ರದ್ಧೆ,ತಾಳ್ಮೆ ಮತ್ತು ಅಧ್ಯಯನಶೀಲತೆಗಳನ್ನು ಮೈಗೂಡಿಸಿಕೊಂಡು ಈ ವಿದ್ಯಾರ್ಥಿ ಜೀವನವನ್ನು ಕಟ್ಟಿಕೊಳ್ಳಬೇಕು. ಇನ್ನು ಪರೀಕ್ಷೆಗೆ ತಯಾರಿ ಪರೀಕ್ಷಾ ಅವಧಿಯಲ್ಲಿ ಮಾತ್ರ ಮಾಡಿಕೊಳ್ಳದೆ ಶಾಲೆ ಆರಂಭವಾದ ಮೊದಲ ದಿನದಿಂದಲೇ ಅಂದಂದಿನ ಪಾಠಗಳನ್ನು ಆಯಾ ದಿನವೇ ಓದಿಕೊಳ್ಳುತ್ತಾ ಅವಶ್ಯಕ ಟಿಪ್ಪಣಿಗಳನ್ನು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಬೇಕು, ಆಗಾಗ ಅವುಗಳನ್ನು ಪುನರಾವರ್ತಿಸಿ ಓದಿಕೊಳ್ಳಬೇಕು. ಹೀಗೆ ಮಾಡುವುದರಿಂದ "ಯುದ್ಧಕಾಲೇ ಶಸ್ತ್ರಾಭ್ಯಾಸ" ಎಂಬಂತಹ ಭಾವ ಹೋಗಿ ಸದಾ ಸನ್ನದ್ಧನಾಗಿರುವುದರಿಂದ ಯಾವುದೇ ರೀತಿಯ ಭಯ, ಹಿಂಜರಿಕೆ, ಕೀಳರಿಮೆಗಳು ವಿದ್ಯಾರ್ಥಿಗಳನ್ನು ಕಾಡುವುದಿಲ್ಲ. ಯಾವಾಗಲೂ ಸನ್ನದ್ಧನಾಗಿರುವ ಸೈನಿಕನಿಗೆ ಯುದ್ಧದ ಬಗ್ಗೆ ಭಯ ಇರುವುದಿಲ್ಲ. ಶ್ರದ್ಧೆ, ಉತ್ಸಾಹ ಮತ್ತು ಎಚ್ಚರ ಸ್ಥಿತಿ ಮಾತ್ರ ಇರುತ್ತದೆ. ಅಂತೆಯೇ ಯಾವಾಗಲೂ ಓದು ಮತ್ತು ಬರಹಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ವ್ಯಕ್ತಿ ಪರೀಕ್ಷೆಯನ್ನು ಹಬ್ಬದಂತೆ ಉತ್ಸಾಹದಿಂದ ಎದುರುಗೊಳ್ಳುತ್ತಾನೆ.

ಇದು ಪರೀಕ್ಷೆಯಲ್ಲಿ ಪಾಸಾಗುವ ಬಗೆ ಆಯಿತು, ಅಕಸ್ಮಾತ್ ಏನೆಲ್ಲ ಪ್ರಯತ್ನ ಮಾಡಿಯೂ ನಮ್ಮ ಆರೋಗ್ಯ ಕೈ ಕೊಟ್ಟರೆ ಇಲ್ಲವೇ ಆಕಸ್ಮಿಕ ಸಂಭವಿಸಿ ಪರೀಕ್ಷೆಯಲ್ಲಿ ಪಾಸಾಗಲು ಸಾಧ್ಯವಾಗದೆ ಹೋದರೆ??. ಖಂಡಿತ ಈ ಸಾಧ್ಯತೆಗಳು ಕೂಡ ಇರುತ್ತವೆ. ನಮ್ಮ ಆರೋಗ್ಯವನ್ನು ನಮ್ಮ ಅಂಗೈಯಲ್ಲಿರುವ ಗೆರೆಗಳಷ್ಟೇ ನಿಚ್ಚಳವಾಗಿ ನಾವು ಕಾಯ್ದುಕೊಳ್ಳಲೇಬೇಕು. ಒಳ್ಳೆಯ ಆಹಾರ ನಮ್ಮ ದೇಹಕ್ಕೆ ಶಕ್ತಿಯನ್ನು ಒದಗಿಸಿದರೆ ಉತ್ತಮ ನಿದ್ರೆ ನಮ್ಮ ಮೆದುಳಿಗೆ ವಿಶ್ರಾಂತಿ ನೀಡುವ ಮೂಲಕ ಶಕ್ತಿಯನ್ನು ಒದಗಿಸುತ್ತದೆ. ನಮ್ಮ ಮನೋದೈಹಿಕ ಆರೋಗ್ಯವನ್ನು ನಾವು ಕಾಯ್ದುಕೊಳ್ಳಬೇಕು. ಆದರೆ ಆಕಸ್ಮಿಕ ಘಟನೆಗಳು ಸಂಭವಿಸಿದಾಗ ಎದೆಗುಂದದೆ ಜೀವನವೇ ಮುಗಿದು ಹೋಯಿತು ಎಂಬಂತೆ ಆಘಾತಗೊಳ್ಳದೆ 'ಮರಳಿ ಯತ್ನವ ಮಾಡು' ಎಂಬ ಮಾತಿನಂತೆ ಇನ್ನಷ್ಟು ಶ್ರದ್ದೆಯನ್ನು ಮೈಗೂಡಿಸಿಕೊಂಡು ಪ್ರಯತ್ನವನ್ನು ಮುಂದುವರಿಸಬೇಕು.

'ಪ್ರಯತ್ನಕ್ಕೆ ಫಲ ಕಟ್ಟಿಟ್ಟ ಬುತ್ತಿ' ಎಂಬುದನ್ನು ಮರೆಯಬಾರದು. ಗೊತ್ತಾಯಿತಲ್ಲವೇ ಮಕ್ಕಳೇ .... ಇನ್ನೇಕೆ ತಡ ತಯಾರಾಗಿ ಪರೀಕ್ಷೆಯ ಹಬ್ಬಕ್ಕೆ. ಎಲ್ಲರಿಗೂ ಒಳಿತಾಗಲಿ.

# ಅಧಿಕಾರಕ್ಕೆ ಬಂದ 9 ತಿಂಗಳಲ್ಲಿ 77 ಸಾವಿರ ಕೋಟಿ ಹೂಡಿಕೆ

**ಬೆಂಗಳೂರು :** ನಾವು ಅಧಿಕಾರಕ್ಕೆ ಬಂದ ಕೇವಲ 9 ತಿಂಗಳಲ್ಲಿ 77 ಸಾವಿರ ಕೋಟಿ ಹೂಡಿಕೆ ಬಂದಿರುವುದೇ ರಾಜ್ಯದ ಕಾನೂನು ಸುವ್ಯವಸ್ಥೆ ಸುಗಮ ಆಗಿರುವುದಕ್ಕೆ ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ ನೀಡಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದರು. ಸರ್ಕಾರದ ಅಭಿವೃದ್ಧಿ ಮತ್ತು ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಜಾರಿ ಹಾಗೂ ಜನಪರ ಯೋಜನೆಗಳಿಗೆ ರಾಜ್ಯಪಾಲರು ಕನ್ನಡಿ ಹಿಡಿದಿದ್ದಾರೆ. ಆದರೆ ಪ್ರತಿ ಪಕ್ಷ ನಾಯಕರಾದ ಆರ್.ಅಶೋಕ್ ರಾಜ್ಯಪಾಲರು ಮಾತಾಡಿದ್ದನ್ನು ಬಿಟ್ಟು ಮಾತಾಡದ್ದನ್ನೆಲ್ಲಾ ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಸುಳ್ಳು ಸುಳ್ಳೇ ಆರೋಪ ಮಾಡಿದ್ದಾರೆ.

ನಾವು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿ ರಾಜ್ಯಕ್ಕೆ 77 ಸಾವಿರ ಕೋಟಿ ಬಂಡವಾಳ ಹರಿದು ಬಂದಿದೆ. ಬಂಡವಾಳ ಹೂಡಿಕೆಗೂ , ಕಾನೂನು ಸುವ್ಯವಸ್ಥೆಗೂ ನೇರಾ ನೇರ ಸಂಬಂಧ ಇರುತ್ತದೆ. ಸರ್ಕಾರದ ಕಡಿಮೆ ಅವಧಿಯಲ್ಲೇ ಇಷ್ಟೊಂದು ಪ್ರಮಾಣದ ಹೂಡಿಕೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಗಮ ಆಗಿರುವುದಕ್ಕೆ ಸಾಕ್ಷಿ ಎಂದು ವಿವರಿಸಿದರು.

ಉಳಿದಂತೆ ಆರ್.ಅಶೋಕ್ ಅವರ ಆರೋಪ ಮತ್ತು ಸುಳ್ಳುಗಳಿಗೆ ಗೃಹ ಸಚಿವ ಪರಮೇಶ್ವರ್ ಅವರು ಈಗಾಗಲೇ ಸ್ಪಷ್ಟ ಉತ್ತರ ನೀಡಿದ್ದಾರೆ. ಉಳಿದದ್ದಕ್ಕೂ ಉತ್ತರ ನೀಡುತ್ತಾರೆ ಎಂದರು. ಬಿಜೆಪಿ ಎಂದರೆ ಸುಳ್ಳು. ಸುಳ್ಳಿನ ಉತ್ಪಾದನೆಯಲ್ಲಿ ಬಿಜೆಪಿ ನಿಸ್ಸೀಮರು. ಅಭಿವೃದ್ಧಿ ಮರೆತು ಸುಳ್ಳುಗಳ ಆಸರೆ ಹೋಗಿದ್ದ ಬಿಜೆಪಿಯನ್ನು ರಾಜ್ಯದ ಜನತೆ ತಿರಸ್ಕರಿಸಿದ್ದಾರೆ. ಇದು ರಾಜ್ಯದ ಜನತೆ ಕೊಟ್ಟಿರುವ ಸರ್ಟಿಫಿಕೇಟ್ ಎಂದರು.

:ಏಕಿ ರಾಜ್ಯದಲ್ಲಿ ಇವತ್ತಿನವರೆಗೂ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದೇ ಇಲ್ಲ: ಹಿಂಬಾಗಿಲಲ್ಲಿ ಬಂದಿದ್ದಾರೆ ಅಷ್ಟೆ. ಬಿಜೆಪಿಯಿಂದ ಯಡಿಯೂರಪ್ಪ, ಬೊಮ್ಮಾಯಿ, ಶೆಟ್ಟರ್, ಸದಾನಂದ ಗೌಡ ಮುಖ್ಯಮಂತ್ರಿ ಆದರು. ಇವರ್ಯಾರೂ ಸ್ಪಷ್ಟ ಬಹುಮತ ಪಡೆದು ಮುಖ್ಯಮಂತ್ರಿ ಆದವರಲ್ಲ. ಆಪರೇಷನ್ ಕಮಲ ಮತ್ತು ಹಿಂಬಾಗಿಲ ಮೂಲಕ ಆಮಿಷವೊಡ್ಡಿ ನಮ್ಮ ಶಾಸಕರನ್ನು ಸೆಳೆದು ಅಧಿಕಾರಕ್ಕೇರಿದರು ಎಂದು ಟೀಕಿಸಿ, ಇವತ್ತಿನವರೆಗೆ ಸ್ಪಷ್ಟ ಬಹುಮತ ಪಡೆದು ಅಧಿಕಾರ ನಡೆಸಿದ ಉದಾಹರಣೆ ಇದೆಯೇ , ಇದ್ದರೆ ತೋರಿಸಿ ಎಂದು ಸವಾಲು ಹಾಕಿದರು.

ನಾವು 2013 ರಲ್ಲಿ 2023 ರಲ್ಲಿ ಸ್ಪಷ್ಟ ಬಹುಮತದ ಮೂಲಕ ಅಧಿಕಾರಕ್ಕೆ ಬಂದಿದ್ದೇವೆ. ಜನ ನಮ್ಮನ್ನು ತಿರಸ್ಕರಿಸಿ ವಿರೋಧ ಪಕ್ಷದಲ್ಲಿ ಕೂರಿಸಿದಾಗಲೂ ತಲೆಬಾಗಿ ಜನರ ತೀರ್ಮಾನವನ್ನು ಒಪ್ಪಿಕೊಂಡು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡಿ ಮತ್ತೆ ಅಧಿಕಾರಕ್ಕೆ ಬಂದಿದ್ದೇವೆ. ನಾವು ಸುಳ್ಳುಗಳ ಆಸರೆಗೆ ಹೋಗಲಿಲ್ಲ ಎಂದರು.



ಕವಿ ಮನಸು

## ಬರೆದೆ ಪದವ ಪೋಣಿಸಿ



ಮುರಳಿಯನ್ನು ಬದಿಯಲಿಟ್ಟು
ಹೆರಳ ಹೆಣೆವ ನೆಪದಲಿ
ಕರೆವ ಮೊದಲೆ ಬಂದೆ ನೀನು
ತರುಣಿ ಮನವು ಖುಷಿಯಲಿ

ಹರಡಿ ನಿಂತ ಹೆರಳನೆಲ್ಲ
ಕರದಲೊಟ್ಟುಗೂಡಿಸಿ
ಸರಿಯದಂತೆ ನೇಯ್ದ ಜಡೆಯ
ಪರಿಯನೆಂತು ಪೇಳಲಿ

ತುರುಬಿನಲ್ಲಿ ಹೂವನಿಟ್ಟೆ
ಮರೆಯಲಾರೆನೀಕ್ಷಣ
ತಿರುಗದಂತೆ ನನ್ನ ತಡೆದು
ಕರದಲಿಟ್ಟೆ ದರ್ಪಣ

ಅರಿಯಲಾರೆ ಹರಿಯೆ ನಿನ್ನ
ಬರೆದೆ ಪದವ ಪೋಣಿಸಿ
ಬಿರಿದ ಹೂವ ತಂದು ನಿನ್ನ
ಚರಣಕಿರಿಸಿ ಪೂಜಿಸಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ನೀಲಿ ಗಗನ !


ನೀಲಿ ಗಗನ
ಮಳೆಯ ತನನ
ಧರೆಗೆ ಹಸಿರ
ಹೂಬನ;
ಪ್ರಾಣಿ ಪಕ್ಷಿ
ಹಾರಿ ಕುಣಿವ
ಸಂತಸದ ಸಮ್ಮಿಲನ !!
ಹಸಿರ ವನವು
ಹೂಬಿಟ್ಟು ಮನಸೆಳೆವ
ಹೊಸತನ;
ಭುವಿಯ ಉತ್ತಿ ಬೀಜ ಬಿತ್ತಿ
ಫಸಲು ಪಡೆವ ರೈತನ
ಹೃದಯತನ !

– ಕಾಡಜ್ಜಿ ಮಂಜುನಾಥ




ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನೀಲಿ ನೆರಳಲ್ಲಿ ಭಾರತ! ನಿಸ್ಸಾರದತ್ತ ಬದುಕು!!



ಸಹಸ್ರಾರು ವರ್ಷಗಳಿಂದ ಭಾರತದ ಭವ್ಯ ಪರಂಪರೆಯನ್ನ ಹಾಳು ಮಾಡಿ ಭಾರತದ ನೈತಿಕತೆಯ ಗುಣಮಟ್ಟವನ್ನ ತುಳಿಯಲು ಪ್ರಯತ್ನ ಪಟ್ಟವರು ಒಬ್ಬರಲ್ಲ ಇಬ್ಬರಲ್ಲ ಅವರು ಅನುಸರಿಸಿದ ದಾರಿಯೂ ಒಂದಲ್ಲ ಎರಡಲ್ಲ ಅಂದಿನ ರಾಜರುಗಳಿಂದ ಹಿಡಿದು ಇಂದಿನ ರಾಜಕಾರಿಣಿಗಳ ತನಕ ಹೊರಗಿನಿಂದ ಆಕ್ರಮಣ, ಒಳನುಸುಳಿವಿಕೆ, ಬಯೋತ್ಪಾದನೆ ಒಂದು ಕಡೆಯಾದರೆ ನಮ್ಮವರೆ ನಮ್ಮ ಮದ್ಯದಲ್ಲಿದ್ದುಕೊಂಡೆ ಸೇವೆಯ ನೆಪದಲ್ಲಿ ಮತಾಂತರ, ಮಾನವ(ಮಕ್ಕಳ) ಕಳ್ಳಸಾಗಣೆಯಂತಹ ಮನೆಹಾಳು ಕೆಲಸದ ಜೊತೆ ಜೊತೆ ಮಾಂಸದ ದಂದೆ, ಮಾನವ ಅಂಗಾಂಗಗಳ ಕಳ್ಳಸಾಗಣೆ ಮಾಡುತ್ತಿರುವ ವಿಷಜಂತುಗಳಿಗೀಗ ಮತ್ತೊಂದು ರಾಜಮಾರ್ಗ ಸಿಕ್ಕಿದೆ, ಇದರಿಂದ ಕೇವಲ ಭಾರತದ ಭವ್ಯ ಪರಂರೆಗೆ ದಕ್ಕೆಯನ್ನುಂಟು ಮಾಡುವುದಷ್ಟೆ ಅಲ್ಲದೆ ಅವರು ಮಾಡುವ ನೀಚಕಾರ್ಯಗಳಿಗೆ ಹಣದ ಮೂಲವನ್ನು ಭದ್ರ ಪಡಿಸಿಕೊಳ್ಳುತ್ತಿದ್ದಾರೆ! ಯಾವಾಗ ಅವರ ಪ್ರಯತ್ನಗಳೆಲ್ಲ ಒಂದೊಂದಾಗಿ ತೊಪಾಗುತ್ತಿರುವುದನ್ನ ಅರಗಿಸಿಕೊಳ್ಳದವರು ಸೊಲಿನ ಹತಾಸೆಯ ಅಂತಿಮ ಅಸ್ತ್ರ ಎನ್ನುವಂತೆ ಭಾರತದ ಮಕ್ಕಳ ತಲೆಗೆ "ನೀಲಿ ಚಿತ್ರಗಳ" ಹುಳು ಬಿಟ್ಟು, ತರುಣ–ತರುಣಿಯರ ಸ್ವಂಟಕ್ಕೆ ಕೈ ಹಾಕಿ ಅವುರುಗಳ ಭವಿಷ್ಯವನ್ನೆ ನಿಸ್ಸಾರ ಗೊಳಿಸಿ ಭಾರತದ ಬೆನ್ನು ಮುರಿಯುವ ಭಂಡತನಕ್ಕೆ ಮುಂದಾಗಿರುವ ಮೂರ್ಖರ ಮೂಂಡುತನಕ್ಕೆ ಏನೆನ್ನಬೇಕು ಅಂತವರನ್ನ ಪಾಲಿಸಿ ಅವರುಗಳಿಗೆ ಬೇಕಾದ ಹಣ, ಸಂಪನ್ಮೂಲಗಳನ್ನ ಹೂಡಿಕೆ ಮಾಡಿ ತಮ್ಮ ಸಂಪತ್ತನ್ನ ಬಿಲಿಯನ್ ಲೆಕ್ಕದಲ್ಲಿ ಎಣಿಸುತ್ತ ವಿಷಸರ್ಪಗಳನ್ನ ಪೊಷಣೆ ಮಾಡಹೊರಟ ನಮ್ಮವರೆ, ನಮ್ಮ ಹಿತ ಶತ್ರುಗಳ ಕುರಿತು ಎಚ್ಚೆತ್ತುಕೊಳ್ಳುವ ಸಮಯ ಬಂದಿದೆ ಪಾಲಕರೆ ಎಚ್ಚ್ಚರ!

ಆಧುನಿಕ ತಂತ್ರಜ್ಞಾನವನ್ನೆ ಬಂಡವಾಳ ಮಾಡಿಕೊಂಡು ನೇರವಾಗಿ ಅವರುಗಳ ನಮ್ಮ ಮನೆ ಮನಗಳಿಗೆ ನುಗ್ಗಿ ಮೆದುಳಿಗೆ ಕೈ ಹಾಕಿ, ಅಸಹ್ಯಗಳನ್ನ ಅಂಗೈಯಲ್ಲಿ ತೋರಿಸಿ ಸಂಬಂದಗಳಿಗೆ ಎಳ್ಳುನೀರು ಬಿಟ್ಟು, ನೀಲಿ ಚಿತ್ರಗಳ ಸುಳಿಯಲ್ಲಿ ನಮ್ಮ ಮಕ್ಕಳನ್ನ ಬಂದಿಸಿ ಅವರ ಭವಿಷ್ಯವನ್ನ ನಮ್ಮ ಸಂಸ್ಕೃತಿಯನ್ನೆ ಹಾಳು ಮಾಡುವ ಹುನ್ನಾರದ ಯೋಜನೆಯನ್ನ ಕಗೆತ್ತಿಕೊಂಡಿದ್ದಾರೆ ಮೊಬೈಲ್, ಐ ಪಾಡ್ , ಕಂಪ್ಯೂಟರ್ ನಂತಹ ಉಪಕರಣಗಳ ನಿಜವಾದ ಉಪಯೋಗವನ್ನೆ ಮರೆಮಾಚಿ, ಜಾಣ ಕುರುಡರಂತೆ ಬೇಡವಾದುದನ್ನ ಸಹಜವಾಗಿ ಸಿಗುವಂತೆ ಮಾಡಿ ನಮ್ಮ ಹಣ, ಸಮಯ, ಶಕ್ತಿಯನ್ನ ದುರುಪಯೋಗ ಮಾಡಿಕೊಳ್ಳುತ್ತೀದ್ದಾರೆ. ಇತ್ತೀಚಿಗೆ ನಮ್ಮ ಪಾಲಕರಲ್ಲಿ ಕೆಲವರು ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಾ "ಏನ್ ಮಾಡೊದು ತಿಳಿತಿಲ್ಲ ಸಾರ್ ಇತ್ತೀಚಿಗೆ ಅವನು ಒಬ್ಬನೆ ಹೆಚ್ಚಾಗಿ ರೂಂ ನಲ್ಲಿ ಇರತಾನೆ, ಹೇಳದೆ ಕೇಳದೆ ಅವನ ರೂಂಗೆ ಹೋದರೆ ರೇಗುತಾನೆ, ಸುಮ್ಮು ಸುಮ್ಮನೆ ಸಿಟ್ಟು ಮಾಡಿಕೊಳ್ಳುತ್ತಾನೆ. ಹೌದರಿ ನನ್ನ ಮಗಳು ಅಷ್ಟೆ ಯಾರಾರೊದೊ ಜೊತೆ ಮಾತನಾಡುತ್ತಾಳೆ, ಕೆಲವು ಸಲ ಎರಡು–ಮೂರು ದಿನ ಮಂಕಾಗಿರುತ್ತಾಳೆ, ಏನೊ ನೆಡೆತಿದೆ, ಹಾಗದರೆ ಏನು ನೆಡೆತಿರಬಹುದು ಅಂತ ಯಾರನ್ನಾದರು ಕೇಳಿದರೆ ಅದರಲ್ಲೇನ್ರಿ ಕಂಪ್ಯೂಟರ್ ಯುಗ ಮಕ್ಕಳು ಮೋಬೈಲ್ ಬೇಕಂತ ಕೇಳೊದರಲ್ಲಿ ತಪ್ಪಾನಿದೆ? ನೀವಿನ್ನು ಯಾವ ಕಾಲದಲ್ಲಿದಿರಿ, ಹುಡುಗರಿಗೆ ಸ್ವಲ್ಪ ಪ್ರವೈಸಿ ಬೇಕು! ಅಂತ ಆಧುನಿಕ ಪ್ರವರ್ತಕರಂತೆ ಎದೆಹುಬ್ಬಿಸುವ ಪಾಲಕರೆ ಅಲ್ಲೆ ನೀವು ದಾರಿ ತಪ್ಪುತಿರುವುದು! ಎಲ್ಲರಿಗು ಅವರವರ ಮಕ್ಕಳು ಮುದ್ದು–ಮುದ್ದೆ ಆದರೆ ಸ್ವಲ್ಪ ಇತ್ತಾ ಗಮನ ಕೊಡಿ! ನಿಮ್ಮ ಮುದ್ದು ಮಕ್ಕಳ ಸುಂದರ ಬವಿಷ್ಯ ಬರಡಾಗೊದೆ ಇಲ್ಲಿ. 2017 ರಲ್ಲಿ ನೆಡೆದ ಸಮೀಕ್ಷೆಯ ಪ್ರಕಾರ ಪ್ರಪಂಚದಲ್ಲಿ ನೀಲಿ ಚಿತ್ರ ವೀಕ್ಷಣೆಯಲ್ಲಿ ಮೂರನೆಯ ಸ್ಥಾನದಲ್ಲಿದ್ದ ಭಾರತ ಈಗ ಅಂದರೆ 2018 ರಲ್ಲಿ ಜಗತ್ತಿನಲ್ಲಿ ನಂ–1! ಇನ್ನು ಸದ್ಯೆಕ್ಕೆ ದರೆ 2020/21 ಇದರ ಪ್ರಮಾಣ ಏನಾಗಿರಬೇಡ!!! ಕ್ರಮವಾಗಿ ಯು ಎಸ್ ಹಾಗು ಯು ಕೆ ಎರಡು, ಮೂರನೆ ಸ್ಥಾನವನ್ನ ಅಲಂಕರಿಸಿವೆ. ಇನ್ನು ಕಳವಳಕಾರಿ ಸಂಗತಿ ಎಂದರೆ ಈ ಸಮೀಕ್ಷೆಯಲ್ಲಿನ ಕೆಲವು ಅಂಶಗಳನ್ನ ಗಮನಿಸಿ

* ಪ್ರತಿ ಸೆಕೆಂಡಗೆ ಒಟ್ಟು ಡೌನ್ ಲೋಡ್ ಆಗುತ್ತಿರುವ ನೀಲಿ ಚಿತ್ರ ದತ್ತಾಂಶ ಪ್ರಮಾಣ 70 ಜಿ ಬಿ!
* ಪ್ರತಿ ಸೆಕೆಂಡಗೆ 28,258 ಜನ ನೀಲಿ ಚಿತ್ರ ವೀಕ್ಷಣೆ ಮಾಡುತ್ತಿದ್ದಾರೆ!
* ಪ್ರತಿ ಸೆಕೆಂಡಗೆ ಸುಮಾರು 372 ಜನ ಸರ್ಚಿ ಇಂಜನಿನಲ್ಲಿ ಅಡಲ್ಟ ಶಬ್ದ ವನ್ನು ಬರೆದು ನೀಲಿ ಚಿತ್ರ ದತ್ತಾಂಶವನ್ನ ಹುಡುಕುತ್ತಾರೆ!

ಇದೆಲ್ಲವು ಪ್ರತಿ ಸೆಕೆಂಡಗೆ! ಅನ್ನುವ ವಿಷಯವನ್ನ ನಾವಿಲ್ಲಿ ಗಮನಿಸಬೇಕು!


ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ
Scan For Digital Colourful
HAMPI TIMES E-paper

ಇಪ್ಪತ್ತನೆಯ ಶತಮಾನದಲ್ಲೂ ನಮ್ಮದೆ ದೇಹದ ಕೆಲ ಬಹುಮುಖ್ಯ ವೈಯಕ್ತಿಕ (ಗುಪ್ತ ) ಅಂಗಾಂಗಗಳ ಬಗ್ಯೆ ಮಾತನಾಡಲು, ಅವುಗಳ ಹೆಸರನ್ನು ಹೇಳಲು ಹಿಂಜರಿವಂತಹ ನಮ್ಮ ಕೌಟಂಬಿಕ ವ್ಯವಸ್ಥೆಯಲ್ಲಿ ನಾವೇಕೆ ಹೀಗೆ? ನಮ್ಮ ಮಕ್ಕಳೆಕೆ ಹೀಗಾದರು? ಯಾವ ಸೆಳೆತ ಅವರನ್ನ ಅಷ್ಟೊಂದು ಆಕರ್ಷಣೆ ಮಾಡಿ ಅವರನ್ನ ವ್ಯಾಸನಿಗಳನ್ನಾಗಿ ಮಾಡಹೊರಟಿದೆ? ಯಾವದಿಕ್ಕಿನತ್ತ ಸಾಗುತಿದೆ ನಮ್ಮ ಯುವಜನತೆ? ಇದಕ್ಕೆಲ್ಲ ಕಾರಣವೇನು? ಎನ್ನುವುದರ ಬೆನ್ನು ಹತ್ತಿ ಹೊರಟ ನನೆಗೆ ಸಿಕ್ಕ ಕೆಲ ಮಾಹಿತಿಗಳು ನನ್ನನ್ನು ದಂಗು ಬಡಿಸಿದ್ದು ಸುಳ್ಳಲ್ಲ! ಪ್ಯಾಟ್ರಿಕ್ ಎಫ್ ಪಾಗೆನ್ (ಮನೋ ವಿಜ್ಞಾನಿ ಮತ್ತು ನಿವೃತ ಉಪ ಸಹಾಯಕರು ಆರೋಗ್ಯ ಮತ್ತು ಮಾನವೀಕ ಸೇವೆ ವಿಭಾಗ, ಯು. ಎಸ್.)ನು ಎರಡು ವರದಿಗಳನ್ನ ಉದಾಹರಿಸುತ್ತ ಆ ವರದಿಗಳು ರೀತಿ ಇವೆ

1– ಆಮೇರಿಕ ಮನೋ ವಿಜ್ಞಾನ ಶಾಸ್ತ್ರದ ಸಂಘದಿಂದ – ಹೈಪರ್ ಸೆಕ್ಸುವಲ್ ಗರ್ಲ್ಸ ಮತ್ತು

2– ತರುಣರಲ್ಲಿ ಗರ್ಭಾವಸ್ಥೆಯನ್ನು(ಪೊರ್ನಗ್ರಫಿಕ್ ಕನ್ಟೆಂಟ್ ಅಪ್ ಪೊನ್ ಟೆಕ್ಸೆಟಿಂಗ್ ಅಮಾಂಗ್ ಟೀನ್ ಏಜರ್ಸ) ತಡೆಗಟ್ಟುವುದರ ಕುರಿತ ರಾಷ್ಟೀಯ ಆಂದೋಲನದ ಅಧ್ಯಾಯನದವರದಿಗಳ ಪ್ರಕಾರ–

ಇಂದಿನ ಯುವಜನತೆ ಮತ್ತು ಮಕ್ಕಳು ಸಂಪರ್ಕ ಕ್ರಾಂತಿಯನ್ನ ತಪ್ಪಾಗಿ ಇಲ್ಲವೆ ಉದ್ದೇಶ ಪೂರಕವಾಗಿಯೆ "ಟು ಡಿಸ್ಮೆಂಟಲ್ ದ ಬ್ಯಾರಿಯರ್ಸ ದಟ್ ಚಾನಲ್ ಸೆಕ್ಸುಯಾಲಿಟಿ ಇನ್ಟು ಫ್ಯಾಮಿಲಿ ಲೈಪ್" ಗಾಗಿ ಉಪಯೋಗಿಸುತಿದ್ದಾರೆ! ಎನ್ನುತ್ತಾರೆ.

ಸದ್ಯೆದ ಪರಿಸ್ಥಿತಿಯಂತು ಇಂತಹ ಅಸಹಜ ಮತ್ತು ಅಸುರಕ್ಷಿತ ಹಾಗು ಸಬ್ಯೆಸಮಾಜಕ್ಕೆ ಮಾರಕವಾಗಬಲ್ಲ ಮತ್ತು ನಮ್ಮ ನವ–ಯುವ ಜನತೆಯ ಅಬಿರುಚಿಯನ್ನ ಹಾಳು ಮಾಡಿ ಸಮಾಜದಲ್ಲಿ ಅನೈತಿಕ ಮತ್ತು ಕಾನೂನುಬಾಹೀರ ಚಟುವಟಿಕೆಗಳು ಉತ್ತೇಜನ ಗೊಳಿಸುವಲ್ಲಿ ನಮ್ಮವರೇ ನಮ್ಮ ಹಿತ ಶತ್ರುಗಳ ಜೊತೆ ಕೈ ಜೋಡಿಸಿ ತಮ್ಮ ಕಾರ್ಯಸಾದಿಸುವಲ್ಲಿ ಯಶಸ್ವಿಯಾಗುತಿದ್ದಾರೆ ಹೊರಗಿನ ಶತ್ರು ಸಂಹಾರಕ್ಕೆ ಕೈಗೊಂಡ ಸರ್ಜಿಕಲ್ ಸ್ಟ್ರೈಕ್ ನಂತಹ ಕಾರ್ಯಾಚರಣೆ ಅಗತ್ತೆತೆ ಈಗ ನಮ್ಮ ಒಳಗಿನ ಹಿತ ಶತ್ರುಗಳನ್ನ ಶದೆಬಡಿಯಲು ಅನಿವಾರ್ಯವಾಗಿದೆ ಅದರಲ್ಲೂ ವಿಶೇಷವಾಗಿ ಅಂತರ್ಜಾಲ ಎನ್ನುವ ಸಾಗರದಲ್ಲಿ ನೀಲಿ ಚಿತ್ರಗಳ ಹಾವಳಿಯಿಂದ ನಮ್ಮ ಮಕ್ಕಳನ್ನ ಕಾಪಾಡಿಕೊಳ್ಳುವುದೇ ನಮ್ಮ ಮುಂದಿರುವ ಬಹುದೊಡ್ಡ ಸಮಸ್ಸ್ಯೆಯಾಗಿದೆ .

ಹಾಗದರೆ ಕೆಲವು ಮೂಲಭೂತ ಪ್ರಶ್ನೆಗಳನ್ನ ನಮೆಗೆ ನಾವೆ ಕೇಳಿಕೊಳ್ಳೊಣ ನೀಲಿ ಚಿತ್ರ ನೋಡಬಹುದೆ? ನೋಡುವುದಾದರೆ ಯಾರು ಯಾರು ನೋಡಬಹುದು? ವಯಸ್ಸಿನ ಮಿತಿ ಏನು? ನೀಲಿಚಿತ್ರ ನೋಡುವುದರಿಂದ ವಯಕ್ತಿಕ, ಕುಟುಂಬದ ಮತ್ತು ಸಮಾಜದ ಮೇಲೆ ಉಂಟಾಗುವ ಪರಿಣಾಮವೇನು? ನೀಲಿ ಚಿತ್ರ ಮತ್ತು ನೀಲಿ ದತ್ತಾಂಶ ಕುರಿತ ನಿರ್ಭಂದ ಸಂಬಂದಿತ ಕಾನೋನು ಇತಿ ಮಿತಿಗಳೇನು?

ನೀಲಿ ಚಿತ್ರಗಳನ್ನ ನೋಡಬಹುದೆ, ನೋಡುವುದಾದರೆ ಯಾರು ಯಾರು ನೋಡಬಹುದು?

ವೈಯಕ್ತಿಕವಾಗಿ ನೀಲಿ ಚಿತ್ರಗಳನ್ನ ನೋಡಬಹುದೆ ಎಂದು ಕೇಳಿದರೆ ನನ್ನಲ್ಲು ಸ್ಪಷ್ಟ ಉತ್ತರವಿಲ್ಲ, ಏಕೆಂದರೆ ಇದೊಂದು ಅವರವರ ವೈಯಕ್ತಿಕ ವಿಷಯವಾಗಿದ್ದು ಅವರವರ ಮಾನಸಿಕ, ವೈಚಾರಿಕ ಅಗತ್ಯೆತೆಯ ಮೇಲೆ ಅವಲಂಬಿತವಾಗಿರುತ್ತದೆಯೆ ಹೊರತು ಏಕೆ ನೋಡಬಾರದು? ಅದು ನನ್ನ ಸ್ವಂತ ವಿಷಯ, ನನ್ನಲ್ಲಿ ನಾನೊಬ್ಬನೆ ವೈಯಕ್ತಿಕವಾಗಿ ನೋಡಿದರೇನು ತಪ್ಪು? ಎಂದು ಕೇಳುವುವರಿಗೆ ನನ್ನ ಅಭ್ಯಂತರವೇನು ಇಲ್ಲ, ಆದರೆ ಅದರಿಂದ ಅನ್ಯರಿಗೆ ಯಾವುದೆ ರೀತಿಯ ತೊಂದರೆ, ಮುಜುಗರ ಉಂಟಾಗದಂತೆ ನೋಡಿಕೊಳ್ಳುವುದು ಎಚ್ಚರ! ಏಕೆಂದರೆ ನೀಲಿ ಚಿತ್ರ ವೀಕ್ಷಣೆ ಮತ್ತು ದತ್ತಾಂಶ ಸಂಗ್ರಹ ಹಾಗು ಮಾರಾಟ ಕುರಿತು ಕಾನೂನಿನಲ್ಲಿ ಸ್ಪಷ್ಟ ಮಾಹಿತಿ ಪಡೆದುಕೊಂಡು ಮುಂದುವರಿಯುವುದು ಉತ್ತಮ ಏಕೆಂದರೆ ಭಾರತದ ಐ.ಟ – ನಿಯಮದ ಪ್ರಕಾರ ನೀಲಿ ಚಿತ್ರ/ದತ್ತಾಂಶ/ಚಿತ್ರವನ್ನ ಇನ್ನೊಬ್ಬರು ನೋಡುವಂತೆ ಮಾಡುವುದು, ಇದಕ್ಕೆ ಸಂಬಂದಿತ ಮಾಹಿತಿಯನ್ನ ಹಂಚಿಕೊಳ್ಳುವುದು ಶಿಕ್ಷಾರ್ಹಾ ಅಪರಾಧ.

ಯಾರು ಯಾರು ನೋಡಬಹುದು ಎನ್ನುವುದಕಿಂತ ಮಕ್ಕಳು ನೋಡಲೇ ಬಾರದು, ಮಕ್ಕಳನ್ನ ಒಳಗೊಂಡಂತ ನೀಲಿ ಚಿತ್ರವನ್ನು ನೋಡುವುದು,ಇತರರು ಮತ್ತು ಮಕ್ಕಳು ನೀಲಿ ಚಿತ್ರವನ್ನು ನೋಡುವಂತೆ ಮಾಡುವುದು ಶಿಕ್ಷಾರ್ಹಾ ಅಪರಾಧ.

ಮುಂದುವರೆಯಲಿದೆ.........

# ಛತ್ರಪತಿ ಶಿವಾಜಿ ದಕ್ಷ ಆಡಳಿತಗಾರ

## ಮೇಯರ್ ಬಿ.ಶ್ವೇತ ಹೇಳಿಕೆ | ಶಿವಾಜಿ ಮಹಾರಾಜರು ಅತ್ಯಂತ ಧೈರ್ಯಶಾಲಿ, ಸಂವೇದನಾಶೀಲ ಆಡಳಿತಗಾರ

■ ಹಂಪಿ ಟೈಮ್ಸ್ ಬಳ್ಳಾರಿ

ಛತ್ರಪತಿ ಶಿವಾಜಿ ಮಹಾರಾಜರು ಭಾರತದ ಅತ್ಯಂತ ಧೈರ್ಯಶಾಲಿ, ಪ್ರಗತಿಪರ ಮತ್ತು ಸಂವೇದನಾಶೀಲ ಆಡಳಿತಗಾರರಲ್ಲಿ ಒಬ್ಬರು. ಅವರು ಮರಾಠ ಸಾಮ್ರಾಜ್ಯದ ಸ್ಥಾಪಕರಾಗಿದ್ದರು. ಸ್ವರಾಜ್ಯ ಮೌಲ್ಯ ಮತ್ತು ಮರಾಠಾ ಪರಂಪರೆಯನ್ನು ತಮ್ಮ ಆಡಳಿತ ಕೌಶಲ್ಯದಿಂದ ಇತಿಹಾಸದಲ್ಲಿ ಅಚ್ಚಳಿಯಾಗಿ ಉಳಿಯುವಂತೆ ಮಾಡಿದವರು ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಬಿ.ಶ್ವೇತ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ. ರಾಜಕುಮಾರ್ ರಸ್ತೆಯ ಬಿ.ಡಿ.ಎ.ಎ ಫುಟ್‌ಬಾಲ್ ಮೈದಾನದ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ, ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಶಿವಾಜಿ ಮಹಾರಾಜರು ತನ್ನ ಮರಾಠ ಸೈನ್ಯದ ಮೂಲಕ ಗೆರಿಲ್ಲಾ ಹೋರಾಟದ ತಂತ್ರಗಳನ್ನು ಪರಿಚಯಿಸಿದ ಮೊದಲ ವ್ಯಕ್ತಿ. ಮೊಘಲರ ವಿರುದ್ಧ ಹಲವಾರು ಯುದ್ಧಗಳನ್ನು ಗೆದ್ದ ಅವರ ಶೌರ್ಯ ಮತ್ತು ತಂತ್ರಗಳಿಗೆ ಹೆಸರುವಾಸಿಯಾಗಿದ್ದರು ಎಂದು ತಿಳಿಸಿದರು.




ಕಾರ್ಯಕ್ರಮದಲ್ಲಿ ಜಯತೀರ್ಥ ಜಾಗೀರದಾರ್ ತಂಡದಿಂದ ವಚನ ಗಾಯನ ಪ್ರಸ್ತುತ ಪಡಿಸಿದರು.

ಮಹಾನಗರ ಪಾಲಿಕೆಯ ಉಪಮೇಯರ್ ಬಿ. ಜಾನಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷರಾದ ಎಂ.ಶಿವಾಜಿರಾವ್ ಸೇರಿದಂತೆ ಸಮಾಜದ ಮುಖಂಡರುಗಳಾದ ಯಶವಂತರಾವ್ ಜಗತಾಪ್, ಅನಿತಾ ಸಾಳುನ್ಕೆ, ನಾಗರಾಜ್ ಚವ್ಹಾಣ್, ದಿನೇಶ್ ನಲವಡೆ, ಶಂಕರ್ ಗಾಯಕವಾಡ್ ಹಾಗೂ ಮುಖಂಡರು, ಇನ್ನೀತರರು ಉಪಸ್ಥಿತರಿದ್ದರು.

ಸಂಭ್ರಮದ ಮೆರವಣಿಗೆ; ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ಸಂಭ್ರಮದಿಂದ ನಡೆಯಿತು. ಮೆರವಣಿಗೆಯಲ್ಲಿ ಡೊಳ್ಳು ವಾದ್ಯ, ತಾಷೆ ರಾಂಡೋಲ್ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಭಾಗವಹಿಸಿ, ಮೆರಗು ನೀಡಿದವು. ಮೆರವಣಿಗೆಗೆ ಮಹಾನಗರ ಪಾಲಿಕೆ ಮೇಯರ್ ಬಿ.ಶ್ವೇತಾ ಅವರು ಚಾಲನೆ ನೀಡಿದರು.

ಮೆರವಣಿಗೆಯು ಶ್ರೀ ಪಾಂಡುರಂಗ ದೇವಸ್ಥಾನದಿಂದ ಆರಂಭವಾಗಿ ಕಾಳಮ್ಮ ಬೀದಿ ಮೂಲಕ ಹಳೆ ಬ್ರೂಸ್‌ಪೇಟೆ ಪೊಲೀಸ್ ಠಾಣೆ ಮಾರ್ಗವಾಗಿ ತೇರು ಬೀದಿ, ಹೆಚ್.ಆರ್ ಗವಿಯಪ್ಪ ಮಾರ್ಗವಾಗಿ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಿಂದ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಬಿಡಿಎಎ ಫುಟ್‌ಬಾಲ್ ಮೈದಾನದ ವೇದಿಕೆ ಸಭಾಂಗಣ ದವರೆಗೆ ಸಾಗಿಬಂದು ಸಂಪನ್ನಗೊಂಡಿತು.

# ಆನ್‌ಲೈನ್ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಮಿತಿ ಮುಂದೆ ಸಲ್ಲಿಸಿ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲೆಯಲ್ಲಿ ಹೊಸದಾಗಿ ಉದ್ಯಮ ಆರಂಭಿಸುವವರು ಏಕಗವಾಕ್ಷಿ ವ್ಯವಸ್ಥೆಯಲ್ಲಿ ಆನ್‌ಲೈನ್ ಮೂಲಕ ಅಗತ್ಯ ಪ್ರಸ್ತಾವನೆ ಸಲ್ಲಿಸಬೇಕು. ನಂತರ ಜಂಟಿ ಕೈಗಾರಿಕಾ ನಿರ್ದೇಶಕರು ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಂತಿಮಗೊಳಿಸಿ ಸಭೆಯ ಮುಂದೆ ಇಡಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರದಂದು ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಆಯೋಜಿಸಲಾಗಿದ್ದ ಏಕಗವಾಕ್ಷಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅದರಬದಲಾಗಿಸರ್ಕಾರದನಿರ್ದೇಶನ,ಮಾರ್ಗಸೂಚಿಯನ್ವಯ ಎಲ್ಲ ಮಾಹಿತಿಯು ಸರಿಯಾಗಿರುವ ಪ್ರಸ್ತಾವನೆಗಳನ್ನು ಮುಂದಿನ ಕ್ರಮಕ್ಕಾಗಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿ. ಯಾವುದೇ ಕಾರಣಕ್ಕೂ ಅರ್ಜಿದಾರರು ಭೌತಿಕವಾಗಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಎಲ್ಲ ನವೋದ್ಯಮಿಗಳು ನಿಯಮಾನುಸಾರ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು ಎಂಬುದನ್ನು ಉದ್ಯಮಿಗಳಿಗೆ ಮುಂಚಿತವಾಗಿಯೇ ಮಾಹಿತಿ ನೀಡಿ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು. ಉದ್ಯಮ ಆರಂಭಕ್ಕೆ ಅಗತ್ಯವಾದ ದಾಖಲೆಗಳು, ನೀಡಬೇಕಾದ ಸೌಲಭ್ಯಗಳು, ವಿದ್ಯುತ್ ಸಂಪರ್ಕ, ನೀರಿನ ವ್ಯವಸ್ಥೆ ಮುಂತಾದವುಗಳನ್ನು ಪರಿಶೀಲಿಸಿ ಅನುಮೋದನೆ ನೀಡಬೇಕು. ಪ್ರಧಾನ ಮಂತ್ರಿ ಉದ್ಯೋಗ ಸೃಜನ ಯೋಜನೆ, ಪಿಎಂ–ವಿಶ್ವಕರ್ಮ ಯೋಜನೆಯ ಫಲಾನುಭವಿಗಳನ್ನು ಗುರುತಿಸಿ, ಸೂಕ್ತ ನೆರವು ಒದಗಿಸಿ ಎಂದು ಅವರು ಹೇಳಿದರು.

ಸಭೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ಎಚ್.ಬಿ.ಚವ್ಹಾಣ ಸೇರಿದಂತೆ ವಿವಿಧ ಇಲಖೆ ಅಧಿಕಾರಿಗಳು, ಉದ್ಯಮಿಗಳು ಹಾಜರಿದ್ದರು.

ಮೈಕ್ರೋ ನ್ಯೂಸ್

## ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಚಂದ್ರಶೇಖರ್ ನಾಯಕ್ ಅಧಿಕಾರ ಸ್ವೀಕಾರ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ವಲಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಚಂದ್ರಶೇಖರ್ ನಾಯಕ್ ಅವರು ಮಂಗಳವಾರ ಅಧಿಕಾರ ಸ್ವೀಕರಿಸಿದರು.



ಇವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಕುರುಡಿಹಳ್ಳಿ ಗ್ರಾಮದವರಾಗಿದ್ದಾರೆ. ಈ ಹಿಂದೆ ಚಾಮ ರಾಜನಗರ ವಲಯ ಮುಖ್ಯ ಅರಣ್ಯ ಸಂರಕ್ಷಣಾಧಿ ಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ನಿಕಟಪೂರ್ವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಟಿ.ಹೀರಲಾಲ್ ಅವರು ವರ್ಗಾವಣೆಗೊಂಡಿದ್ದು, ಅವರ ಸ್ಥಾನಕ್ಕೆ ಚಂದ್ರಶೇಖರ್ ನಾಯಕ್ ಅವರನ್ನು ನಿಯುಕ್ತಿಗೊಳಿಸಿ ಆದೇಶಿಸಿದೆ ಎಂದು ಪ್ರಕಟಣೆ ತಿಳಿಸಿದೆ.

## ರೈತರಿಂದ ಮೇವು ಖರೀದಿಗೆ ದರ ನಿಗದಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲ್ಲೂಕಿನ ಜಾನುವಾರುಗಳಿಗೆ ಮೇವಿನ ಅಗತ್ಯವಿದ್ದ ಪ್ರಯುಕ್ತ ಮೇವು ಖರೀದಿ ಮಾಡಲು ದರ ನಿಗದಿ ಮಾಡಲಾಗಿದೆ ಎಂದು ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ತಾಲ್ಲೂಕಿನ ರೈತರು ಮತ್ತು ಮೇವು ವಿತರಕರು, ಸರಬರಾಜುದಾರರು ತಮ್ಮ ಬಳಿ ಇರುವ ಮೇವನ್ನು ಒಂದು ಟನ್ ಭತ್ತ ಅಥವಾ ರಾಗಿ ಹುಲ್ಲಿಗೆ 6,000 ಮತ್ತು ಸಾಕಾಣಿಕೆ ವೆಚ್ಚ ರೂ.15/ ಟನ್/ಕೀ.ಮೀ. ರಂತೆ ನಿಗದಿಯಾಗಿದೆ. ಆಸಕ್ತ ರೈತರು ದರ ಪಟ್ಟಿಗಳನ್ನು ಫೆಬ್ರುವರಿ 27ರ ಸಂಜೆ 4 ಗಂಟೆಯೊಳಗಡೆ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಪಶು ಆಸ್ಪತ್ರೆ, ಈ ಕಚೇರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು.

## ಫೆ.26, 27ರಂದು ಬೆಂಗಳೂರಿನಲ್ಲಿ ಬೃಹತ್ ಉದ್ಯೋಗ ಮೇಳ: ಭಾಗವಹಿಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಫೆಬ್ರವರಿ 26 ಮತ್ತು ಫ.27ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸಲು ನಿರುದ್ಯೋಗ ಯುವಕ ಯುವತಿಯರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ

ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯದ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ದೊರಕಿಸುವ ಸಲುವಾಗಿ ಬೃಹತ್ ಕೈಗಾರಿಕೆ, ಉನ್ನತ ಶಿಕ್ಷಣ, ಯುವಸಬಲೀಕರಣ, ಕೌಶಲ್ಯಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ ಹಾಗೂ ಇತ್ಯಾದಿ ಸಚಿವರನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ, ಈ ಸಮಿತಿಯ ಮಾರ್ಗದರ್ಶನದಂತೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲು ನಿರ್ಧರಿಸಲಾಗಿದೆ.

ಈ ಉದ್ಯೋಗ ಮೇಳದಲ್ಲಿ ಸುಮಾರು 500 ಕಂಪನಿಗಳು ಭಾಗವಹಿಸಿ ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿವೆ. ಈ ಮೇಳದಲ್ಲಿ ಕರ್ನಾಟಕದಾದ್ಯಂತ ಎಲ್ಲಾ ಜಿಲ್ಲೆಗಳಿಂದ ಎಲ್ಲಾ ವಿದ್ಯಾರ್ಹತೆಯ ವಿದ್ಯಾರ್ಥಿಗಳು ಹಾಗೂ ಖಾಸಗಿ ವಲಯದ ಯಾವುದೇ ನಿಯೋಜಕರು (ಕಂಪನಿಗಳು) ಭಾಗವಹಿಸಬಹುದಾಗಿದೆ. ಅಭ್ಯರ್ಥಿಗಳು ಮತ್ತು ಕಂಪನಿಗಳು ವೆಬ್‌ಸೈಟ್ https://udyogamela.skillconnect.kaushalkar.com/ ನಲ್ಲಿ ಮುಂಚಿತವಾಗಿ ನೋಂದಣಿ ಮಾಡುವುದರ ಮೂಲಕ ಭಾಗವಹಿಸಬಹುದಾಗಿದೆ. ಅಲ್ಲದೆ ಕ್ಯೂ ಆರ್ ಕೋಡ್ ಮೂಲಕವೂ ನೋಂದಾಯಿಸ ಬಹುದಾಗಿದೆ. ವಿಜಯನಗರ ಜಿಲ್ಲೆಯ ಎಲ್ಲಾ ನಿರುದ್ಯೋಗಿ ಯುವಕ ಯುವತಿಯರು ವೆಬ್‌ಸೈಟ್‌ನಲ್ಲಿ ನೋಂದಾಯಿಸುವುದರ ಮೂಲಕ ಭಾಗವಹಿಸಿ ಉದ್ಯೋಗದ ನೆರವು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಜಯನಗರ ಜಿಲ್ಲೆಯ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಅಥವಾ ಮೊ.ಸಂಖ್ಯೆ: 8073852104 & 9964502514 ಗೆ ಸಂಪರ್ಕಿಸಬಹುದಾಗಿದೆ.

# ಶಾಸನಗಳು ಅಂದಿನ ವರ್ತಮಾನಗಳ ಕನ್ನಡಿ

### ಡಾ.ಎಸ್.ಕೆ.ಅರುಣಿ ಅಭಿಮತ | ಐರೋಪ್ಯರ ದಾಖಲೆಗಳಲ್ಲಿ ವಿಜಯಪುರದ ವಿವರಣೆಗಳು: ಒಂದು ಹೊಸ ಓದು

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯಪುರದ ಶಾಸನಗಳ ದಾಖಲೆಗಳ ಪ್ರಕಾರ ಸಿಂಧಗಿ ತಾಲೂಕಿನ ತರ್ದವಾಡಿ ಪ್ರದೇಶಕ್ಕೆ ಸೇರಿದ ಕನ್ನಡ, ಮರಾಠಿ, ಪರ್ಶಿಯನ್ ಶಾಸನಗಳು ಅಲ್ಲಿನ ಭಾಷೆ, ಧರ್ಮ ರಾಜಕೀಯ ವಿಚಾರಗಳನ್ನು ಪ್ರಸ್ತಾಪಿಸುತ್ತವೆ. ಮಧ್ಯಕಾಲೀನ ಕಾಲಘಟ್ಟದ ಆಗ್ರಾ ಮತ್ತು ಸೂರತ್ ಹೊರತುಪಡಿಸಿದರೆ ದಖನ್ ಪ್ರದೇಶದಲ್ಲಿ ವಿಜಯಪುರವು ಹೆಚ್ಚು ಉಲ್ಲೇಖಗೊಂಡಿದೆ ಎಂದು ಐಸಿಎಚ್‌ಆರ್ ಬೆಂಗಳೂರು ದಕ್ಷಿಣ ಪ್ರಾದೇಶಿಕ ಕೇಂದ್ರದ ಉಪನಿರ್ದೇಶಕ ಡಾ.ಎಸ್.ಕೆ.ಅರುಣಿ ಹೇಳಿದರು.



ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಚರಿತ್ರೆ ವಿಭಾಗ ಇತ್ತೀಚೆಗೆ ಬಾಗಲಕೋಟೆಯ ಶ್ರೀ ಬಸವವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ದತ್ತಿನಿಧಿ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ವಿಶೇಷ ದತ್ತಿ ಉಪನ್ಯಾಸದಲ್ಲಿ "ಐರೋಪ್ಯರ ದಾಖಲೆಗಳಲ್ಲಿ ವಿಜಯಪುರದ ವಿವರಣೆಗಳು: ಒಂದು ಹೊಸ ಓದು" ವಿಷಯದ ಕುರಿತು ಮಾತನಾಡಿದರು. ಮಧ್ಯಕಾಲೀನ ನಗರ ವ್ಯವಸ್ಥೆಯಲ್ಲಿ ಆಯಕಟ್ಟಿನ ಸ್ಥಳಗಳು ಹೆಚ್ಚು ಪ್ರಚಲಿತಕ್ಕೆ ಬಂದ ಪರಿಣಾಮ ಫಲವತ್ತಾದ ಭೂಮಿ ಮತ್ತು ಕೃಷಿ ಬಳಕೆಯಿಂದ ನಗರೀಕರಣಕ್ಕೆ ಹೆಚ್ಚು ಒತ್ತು ನೀಡಿತು. ಜನಸಮುದಾಯಗಳು, ಕುಶಲಕರ್ಮಿ ವರ್ಗಗಳ ಪ್ರಾಮುಖ್ಯತೆ ಹೆಚ್ಚಿತು. ವಿಜಯಪುರ ನಗರ ನಿರ್ಮಾಣ ಆದಿಲ್ ಶಾಹಿ ಕಾಲದಲ್ಲಿ ಬಲಗೊಂಡ ವಿಚಾರವನ್ನು ಪೋರ್ಚುಗೀಸರ ಫಾದರ್ ಹೆರಾಸ್, ಫ್ರಾನ್ಸಿಸ್ಕೊ ಲೊಪೆಜ್, ಆಂಟೋನಿಯೊ ಪೆಗಾಡೋ, ಗೋಮಾಲೊ ರೊದ್ರಿಗ್ಸ್ ಪಾದ್ರಿಗಳ ವಿವರಣೆಯಿಂದ ತಿಳಿಯಬಹುದು. ಹಾಗೆಯೇ ಡಚ್ ದಾಖಲೆಗಳು, ಬ್ರಿಟಿಶ್ ಗ್ಯಾಜೆಟಿಯರ್‌ಗಳು, ಕ್ರೈಸ್ತ ಮಿಶನರಿಗಳ ದಾಖಲೆಗಳು ಇಲ್ಲಿನ ನೀರಾವರಿ, ತೋಟಗಾರಿಕೆ ಕುರಿತ ಸಂಗತಿಗಳನ್ನು ತಿಳಿಸುತ್ತವೆ. ವಿಜಯಪುರ ನಗರದ ವಿವರಣೆಯನ್ನು ನೀಡಿದ ಐರೋಪ್ಯರಾದ ಜೇಮ್ಸ್ ವೆಲ್ಸ್ ನೀಡಿದ ಮಾಹಿತಿಯು ಮಹತ್ವದ್ದೆನಿಸುತ್ತದೆ. 1898ರಲ್ಲಿ ಕರ್ಜನ್‌ನು ಇಂಡಿ ಹತ್ತಿರದ ಖಗ್ರಾಸ ಚಂದ್ರಗ್ರಹಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ವಿಜಯಪುರಕ್ಕೆ ಭೇಟಿ ನೀಡಿದ್ದನು ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ವಾಣಿಜ್ಯ–ವ್ಯಾಪಾರಗಳ ಬಲಗೊಳ್ಳುವಿಕೆಗೂ ನಗರೀಕಣಕ್ಕೂ ಇರುವ ಸಂಬಂಧ ಮಹತ್ವದ್ದು. ಈ ಹಿನ್ನೆಲೆಯಲ್ಲಿ ವಿಜಯನಗರ ಮತ್ತು ವಿಜಯಪುರಗಳು ಪರಸ್ಪರ ಹೊಂದಿದ್ದ ಸಂಬಂಧವನ್ನು ಮರುವಿವೇಚಿಸಬೇಕಿದೆ ಎಂದು ಹೇಳಿದರು.

ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಮೋಹನ್‌ಕೃಷ್ಣ ರೈ ಪ್ರಾಸ್ತಾವಿಕ ಮಾತನಾಡಿ, ಚರಿತ್ರೆ ಬರವಣಿಗೆ ಕ್ರಮಗಳಲ್ಲಿ ಸಾಮಾಜಿಕ ಚರಿತ್ರೆಯ ದೃಷ್ಟಿಯಿಂದ ಮರು ಅಧ್ಯಯನಕ್ಕೆ ಮುಂದಾಗಬೇಕಿದೆ. ವಿಜಯನಗರ ಚರಿತ್ರೆಗೆ ಕೊಟ್ಟಷ್ಟು ಮಹತ್ವವನ್ನು ವಿಜಯಪುರದ ಚರಿತ್ರೆಗೆ ನೀಡಬೇಕಾದ ಅವಶ್ಯಕತೆಯಿದೆ. ವಸಾಹತುಶಾಹಿ ಬರವಣಿಗೆಯ ಪೂರ್ವಾಗ್ರಹಗಳನ್ನು ಮೀರಬೇಕಿದೆ ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ, ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಾ.ಇ. ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ವೈ.ಸೋಮಶೇಖರ್ ಮತ್ತು ವಿಶ್ವವಿದ್ಯಾಲಯದ ಸಂಶೋಧನಾರ್ಥಿಗಳು ಇದ್ದರು. ಸಂಶೋಧನಾ ವಿದ್ಯಾರ್ಥಿಗಳಾದ ಮಹೇಶ ವಿ., ಮಣಿಕಂಠ ಹಂಗಳ ನಿರ್ವಹಿಸಿದರು.

## ಸರ್ವಜ್ಞನ ತ್ರಿಪದಿಗಳು ಬದುಕಿಗೆ ದಾರಿ ದೀಪ

### ನಿವೃತ್ತ ನೌಕರರ ಸಂಘದ ತಾಲೂಕಧ್ಯಕ್ಷ ಎ.ಎಂ. ವೀರಯ್ಯ ಅಭಿಮತ | ಸರ್ವಜ್ಞ ಜಯಂತಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ತಾಲೂಕು ಕಚೇರಿಯಲ್ಲಿ ಮಂಗಳವಾರ ತಾಲೂಕು ಆಡಳಿತ ಹಾಗೂ ತಾಲೂಕು ಕುಂಬಾರರ ಸಂಘದಿಂದ ಸರ್ವಜ್ಞ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರ್ವಜ್ಞ ಜಯಂತಿ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ನೌಕರರ ಸಂಘದ ತಾಲೂಕು ಅಧ್ಯಕ್ಷ ಎ.ಎಂ. ವೀರಯ್ಯ ಮಾತನಾಡಿ, ಸರ್ವಜ್ಞನ ವಚನಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನವಾಗಿವೆ. ಸರ್ವಜ್ಞನ ತ್ರಿಪದಿಗಳಲ್ಲಿ ಒಂದೊಂದು ಸಾಲಿನಲ್ಲಿನ ಅರ್ಥಗಳು ಬದುಕಿಗೆ ದಾರಿ ದೀಪವಾಗಿವೆ. ಇವುಗಳನ್ನು ಇಂದಿನ ಯುವ ಜನಾಂಗಕ್ಕೆ ತಿಳಿಸಬೇಕು. ತಮ್ಮ ವಚನಗಳ ಮೂಲಕ ಬದುಕಿನ ಅರ್ಥವನ್ನು ಹೇಳಿರುವ ಮಹಾ ಕವಿ ಸರ್ವಜ್ಞನ ಚಿಂತನೆಗಳು ಇಂದಿಗೂ ಪ್ರಸ್ತುವಾಗಿವೆ. ವಿಶ್ವವೇ ತನ್ನ ಕುಟುಂಬ ಎಂದುಕೊಂಡಿದ್ದ ಸರ್ವಜ್ಞ ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ತಿಳಿಯದ ವಿಷಯವಿಲ್ಲ ಎಂಬಂತೆ ಸರ್ವವನ್ನೂ ತಿಳಿದವರಾಗಿದ್ದರು ಎಂದರು.

ಶಿರಸ್ತೆದಾರ್ ಮಹಮದ್ ಗೌಸ್ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಸರ್ವಜ್ಞ ಕುಂಬಾರರ ಸಂಘದ ಅಧ್ಯಕ್ಷ ಕೆ. ತಿಪ್ಪೇರುದ್ರ, ಕಾರ್ಯದರ್ಶಿ ನಾಗರಾಜ ಕುಂಬಾರ, ಖಜಾಂಚಿ ಕೆ. ಶ್ರೀನಿವಾಸ್, ಮುಖಂಡರಾದ ಶಿವರಾಮಪ್ಪ, ಮಲ್ಲೇಶಪ್ಪ, ರಾಮಚಂದ್ರಪ್ಪ, ನಿವೃತ್ತ ನಿಲಯ ಪಾಲಕ ಸಿರಬಿ ಅಂಜಿನಪ್ಪ, ಎ.ಎಂ. ಷಡಕ್ಷರಯ್ಯ, ಶೇಷಪ್ಪ ಕಾಟೇರ್, ಸೇರಿದಂತೆ ವಿವಿಧ ಗ್ರಾಮಗಳಿಂದ ಬಂದಿದ್ದ ಕುಂಬಾರ ಸಮಾಜದ ಮುಖಂಡರುಗಳು ಹಾಗೂ ತಾಲೂಕು ಕಚೇರಿ ಸಿಬ್ಬಂದಿ ಭಾಗಿಯಾಗಿದ್ದರು.

## ತಿಪ್ಪಾಪುರ, ದೇವಗೊಂಡನಹಳ್ಳಿಯಲ್ಲಿ ಜನಜಾಗೃತಿ ಬೀದಿನಾಟಕ



**ಹಂಪಿ ಟೈಮ್ಸ್ ಹೊಸಪೇಟೆ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಗ್ರಾಮ ಸಂಪರ್ಕ ಯೋಜನೆಯಡಿ ಹೂವಿನಹಡಗಲಿ ತಾಲೂಕಿನ ಹ್ಯಾರಡ ಗ್ರಾಮದ ಜನನಿ ಪುಷ್ಪಕಲಾ ಯುವಕ ಸಂಘದ ಕಲಾ ತಂಡದವರು ಫೆ.20ರಂದು ಹೂವಿನಹಡಗಲಿ ತಾಲೂಕಿನತಿಪ್ಪಾಪುರಹಾಗೂದೇವಗೊಂಡನಹಳ್ಳಿ ಗ್ರಾಮಗಳಲ್ಲಿ ಬೀದಿನಾಟಕ ಪ್ರದರ್ಶಿಸಿ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿದರು.

ಜನನಿ ಪುಷ್ಪಕಲಾ ಯುವಕ ಸಂಘದ ಟಿ ಚಮನ್ ಸಾಹೇಬ್, ಎಂ ಮಂಜುನಾಥ್, ಎಸ್ ಕೃಷ್ಣಪ್ಪ ಗೋವಿಂದ, ಹನುಮಯ್ಯ, ವಸಂತ ಕುಮಾರಿ, ಮನತ ಕೆ ಎಸ್, ರವಿಕುಮಾರ್, ಮಹಾಂತೇಶ ಸೇರಿದಂತೆ ಇನ್ನಿತರರು ಬೀದಿನಾಟಕ ಪ್ರದರ್ಶಿಸಿ, ಗ್ರಾಮದಲ್ಲಿ ಸಂಚರಿಸಿ, ತಮಟೆ ಭಾರಿಸಿ, ಹಾಡು ಹೇಳುವುದರ ಮೂಲಕ ಸರ್ಕಾರದ ಗ್ಯಾರಂಟಿ ಯೋಜನೆಗಳು ಸೇರಿದಂತೆ ಶುಚಿತ್ವ, ನೀರಿನ ಮಿತಬಳಕೆ ಹಾಗೂ ನಾನಾ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

## ಇಂದು ಕೂಡ್ಲಿಗಿಗೆ ಚಕ್ರವರ್ತಿ ಸೂಲಿಬೆಲೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ನಮೋ ಭಾರತ ಎನ್ನುವ ಶೀರ್ಷಿಕೆ ಮೂಲಕ ಖ್ಯಾತ ಲೇಖಕರು, ವಾಗ್ಮಿ, ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಫೆ.21 ರಂದು ಪಟ್ಟಣಕ್ಕೆ ಆಗಮಿಸಿ ಬಹಿರಂಗ ಸಭೆ ನಡೆಸಲಿದ್ದಾರೆ ಎಂದು ನಮೋ ಬ್ರಿಗೇಡ್ ನ ಕೆ.ಎಚ್.ಎಂ.ಸಚಿನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಟ್ಟಣದ ಗುಡೇಕೋಟೆ ರಸ್ತೆಯ ತರುಳಬಾಳು ಶಾಲೆ ಆವರಣದಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಗೆ ಆಗಮಿಸಿ ಈಗ ಶುರುವಾಗಲಿದೆ ನಿಜವಾದ ಭಾರತದ ಕಾಲ ಎನ್ನುವ ವಿಶೇಷ ವಿಷಯದ ಕುರಿತು ಮಾತನಾಡಲಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೋದಿ ಮತ್ತೊಮ್ಮೆ ಎಂದು ಯುವಕರಿಗೆ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಆದ್ದರಿಂದ ತಾಲೂಕಿನ ಯುವಕ, ಯುವತಿಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ಸಿ ಗೊಳಿಸಲು ಕೋರಿದರು.

## ಕಾರಿಗನೂರು ಜಾತ್ರೆ, ಮದ್ಯ ಮಾರಾಟ ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ**

ಕಾರಿಗನೂರ ಗ್ರಾಮದಲ್ಲಿ ಶ್ರೀ ಪಾಂಡುರಂಗ ಸ್ವಾಮಿ ಮತ್ತು ಓಂಕಾರೇಶ್ವರ ಸ್ವಾಮಿ ಜೋಡಿ ರಥೋತ್ಸವದ ಅಂಗವಾಗಿ ಕಾರಿಗನೂರು ಗ್ರಾಮದಲ್ಲಿ ಫೆ.21 ಬೆಳಗ್ಗೆ 6 ರಿಂದ ಫೆ.22 ಬೆಳಗ್ಗೆ 6 ಗಂಟೆವರೆಗೆ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಜಾತ್ರೆಯ ಸಮಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಕಾರಿಗನೂರು ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿ, ಬಾರ್, ರೆಸ್ಟೋರೆಂಟ್ ಮತ್ತು ಇತರೆ ಸ್ಥಳಗಳಲ್ಲಿ ಮದ್ಯ ಮಾರಾಟ ಮತ್ತು ಸಾಗಾಣಿಕೆ ಮಾಡದಂತೆ ಹಾಗೂ ಮದ್ಯದಂಗಡಿಗಳನ್ನು ಮುಚ್ಚುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು ಈ ಆದೇಶವನ್ನು ಅನುಷ್ಠಾನಕ್ಕೆ ತರಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ವಹಿಸಬೇಕು ಎಂದು ಆದೇಶದಲ್ಲಿ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಕೊಟ್ಟೂರಲ್ಲಿ ಸರ್ವಜ್ಞ ಜಯಂತಿ

### ಪಪಂ. ಎ. ನಸರುಲ್ಲಾ ಹೇಳಿಕೆ | ಸರ್ವಜ್ಞರು ವಚನಗಳು ಬದುಕಿಗೆ ಆದರ್ಶ



**ಹಂಪಿ ಟೈಮ್ಸ್ ಕೊಟ್ಟೂರು**

ಸಮಾಜದಲ್ಲಿನ ಅಂಕು ಡೊಂಕುಗಳನ್ನು ಮೂಡನಂಬಿಕೆಗಳನ್ನು ಹಳೆಯ ಸಂಪ್ರದಾಯ ಮತ್ತು ಕಟ್ಟಾ ಚಾರಣೆ ಕುರಿತು ತನ್ನ ತ್ರಿಪದಿಗಳಿಂದ ಸಮಾಜಕ್ಕೆ ಪ್ರಸ್ತುತಪಡಿಸಿದ ಮಹಾನ್ ಜ್ಞಾನಿ ಕವಿ ಸರ್ವಜ್ಞರು, ಇವರ ವಚನಗಳು ನಮ್ಮ ಬದುಕಿಗೆ ಆದರ್ಶ ಎಂದು ಪಪಂ ಮುಖ್ಯಾಧಿಕಾರಿ ಎ. ನಸರುಲ್ಲಾ ಹೇಳಿದರು.

ಪಟ್ಟಣದ ಪಂಚಾಯತಿ ಕಚೇರಿಯಲ್ಲಿ ಮಂಗಳವಾರ ಕವಿ ಸರ್ವಜ್ಞರ ಜಯಂತಿ ಪ್ರಯುಕ್ತ , ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತಿಯನ್ನು ಸರಳವಾಗಿ ಅರ್ಥಗರ್ಭಿತವಾಗಿ ಆಚರಣೆ ಮಾಡಲಾಯಿತು.

ಸರ್ವಜ್ಞರು ಬುದ್ದಿವಂತನಾಗಿದ್ದರೂ ಸಹ ತಾನು "ಎಲ್ಲರೊಳಗೊಂದೊಂದು ನುಡಿಗಲಿತು" ಸರ್ವಜ್ಞನಾದೆ ಎಂಬ ಅವರ ವಚನವು ಅವರ ಸರಳತೆಯ ಪ್ರತೀಕವಾಗುತ್ತದೆ. ಇಂತಹ ಸರಳ ಸಜ್ಜನಿಕೆಯ ಮೇಧಾವಿ ಕವಿಯ ಸ್ಮರಣೆ ನಮಗೆಲ್ಲ ಅತ್ಯಂತ ಅವಶ್ಯಕ ಎಂದರು.

ಈ ವೇಳೆ ಪಟ್ಟಣ ಪಂಚಾಯತಿ ಸದಸ್ಯರು ಬಾವಿಕಟ್ಟಿ ಶಿವಾನಂದ, ಪಪಂ ಇಂಜಿನಿಯರ್ ಸಲೊಮಿ ನಿಹಾರಿಕ,ಪಪಂ ಆರೋಗ್ಯ ನೀರಿಕ್ಷಕರು ಅನುಷಾ,ಪಪಂ ಕಂದಾಯ ನಿರೀಕ್ಷಕರು ಕೊಟ್ರೇಶ್, ಸಿಬ್ಬಂದಿ ಪರುಶಪ್ಪ, ಅಗಡಿ ಮಂಜುನಾಥ, ವಿಜಯಕುಮಾರ್, ಸುಮ್ಮಕ್ಕ, ಕೇಶವ, ಗುರುಬಸವರಾಜ್, ತಿಮ್ಮಣ್ಣ, ಚನ್ನಬಸಪ್ಪ, ಮಂಜುನಾಥ ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA